ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ

ಸಂಪುಟ : 6 । ಸಂಚಿಕೆ : 4 । ಏಪ್ರಿಲ್ - 2024 । ಪುಟಗಳು : 20 । ಬೆಲೆ : 25/-

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

## ಸಮಸ್ತ ಸಹಕಾರಿ ಬಂಧುಗಳಿಗೆ



ವಿ. ರಾಜು
ಅಧ್ಯಕ್ಷರು



## ಯುಗಾದಿ
### ಹಬ್ಬದ ಶುಭಾಶಯಗಳು



ಕೆ. ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು

ಆಡಳಿತ ಮಂಡಳಿ ಸದಸ್ಯರು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ
ಮಹಾಮಂಡಳ ನಿ., ಬೆಂಗಳೂರು.

## ಶಿವಮೊಗ್ಗ ಜಿಲ್ಲೆಯಲ್ಲಿ ಪತ್ತಿನ ಸಹಕಾರ ಸಂಘಗಳಿಗೆ ತರಬೇತಿ ಕಾರ್ಯಾಗಾರ



# ಪತ್ತಿನ ಮಹಾಮಂಡಳದ ಅಧ್ಯಕ್ಷರಿಂದ ಪ್ರಧಾನಿ ಭೇಟಿ



ಇತ್ತೀಚೆಗೆ ಶಿವಮೊಗ್ಗ ನಗರಕ್ಕೆ ಭೇಟಿ ನೀಡಿದ್ದ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರನ್ನು ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ವಿ.ರಾಜುಅವರು ವಿಮಾನ ನಿಲ್ದಾಣದಲ್ಲಿ ಆತ್ಮೀಯವಾಗಿ ಸ್ವಾಗತ ಕೋರಿದರು.



ಸಹಕಾರ ಇಲಾಖೆ ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಗೆ ಮತ್ತು ವಿವಿಧೋದ್ದೇಶ ಸಹಕಾರ ಸಂಘಗಳಿಗೆ ಹೊರಡಿಸಿರುವ ಇತ್ತೀಚಿನ ಆದೇಶವನ್ನು ರದ್ದುಪಡಿಸುವಂತೆ ಕೋರಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನಿರ್ದೇಶಕರಾದ ಡಾ॥ಸಂಜಯ ಪಿ ಹೊಸಮಠ ಮತ್ತು ಶ್ರೀ ತಮ್ಮಣ್ಣ ಬಾಲಪ್ಪ ಕೆಂಚರಡ್ಡಿ ಅವರ ನೇತೃತ್ವದಲ್ಲಿ ಮೂಡಲಗಿ, ಗೋಕಾಕ್, ಅಥಣಿ ಮತ್ತು ಸವದತ್ತಿ ತಾಲ್ಲೂಕುಗಳ ಸಹಕಾರಿಗಳು ಸಚಿವರಾದ ಶ್ರೀ ಸತೀಶ ಜಾರಕಿಹೊಳಿ ಅವರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತ ಮಂಡಳಿ



ಸಿದ್ದನಗೌಡ ಸಂಣರಾಮನಗೌಡ ಪಾಟೀಲ
ಸಹಕಾರಿ ಪಿತಾಮಹ



ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು



ಶ್ರೀ ವಿ. ರಾಜು
ಅಧ್ಯಕ್ಷರು



ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ನಿರ್ದೇಶಕರು



ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು



ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು



ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು



ಶ್ರೀ ಎಂ.ಜಿ. ನರೇಂದ್ರ ಕುಮಾರ
ನಿರ್ದೇಶಕರು



ಶ್ರೀ ಡಿ. ಚನ್ನಯ್ಯ
ನಿರ್ದೇಶಕರು



ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು



ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು



ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು



ಶ್ರೀ ಧರೇಪ್ಪ ಎಂ. ಅಲಗೂರ
ನಿರ್ದೇಶಕರು



ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು



ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು



ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು



ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು



ಶ್ರೀ ಹೆಚ್.ಬಿ. ನಾಗೇಶ್
ನಿರ್ದೇಶಕರು



ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು



ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು



ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು



ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು



ಶ್ರೀ ಪ್ರಜ್ವಲ್ ಕೆ.ಎಸ್.
ಮುಖ್ಯಕಾರ್ಯನಿರ್ವಹಣಾಧಿಕಾರಿ

**SAHAKARA VARTHA PATHRIKE KANNADA MONTHLY**
RNI-Reg No. KARKAN/2018/75796
Post Reg No. KA-BGW/1816/2022-24
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 31st of Previous Month
License to post without prepayment
PMG BG/WPP-405/2022-2024




ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು.
ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

**Printed at : Biligiri Printers**
**Chamrajpet, Bengaluru - 18**

## ಸಂಪಾದಕೀಯ



ವಿ. ರಾಜು
ಅಧ್ಯಕ್ಷರು

**ಹೆಚ್ಚಿನ ಪ್ರಮಾಣದಲ್ಲಿ ಮತದಾರರು ಮತದಾನ ಕೇಂದ್ರಗಳಿಗೆ ತೆರಳಿ ತಮ್ಮ ಹಕ್ಕನ್ನು ಚಲಾಯಿಸಲು ಇದು ಸಕಾಲವಾಗಿದೆ. ಜೂನ್ 4ರಂದು ಫಲಿತಾಂಶ ಪ್ರಕಟವಾಗಲಿದ್ದು ಮತದಾರ ಯಾರ ಕೈ ಹಿಡಿಯಲಿದ್ದಾರೆ ಎಂದು ಸ್ಪಷ್ಟವಾಗಿ ತಿಳಿಯಲಿದೆ. ಕರ್ನಾಟಕದಲ್ಲಿ ಎರಡು ಹಂತಗಳಲ್ಲಿ 28 ಲೋಕಸಭಾ ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು ಪ್ರಮುಖ ಪಕ್ಷಗಳ ಅಭ್ಯರ್ಥಿಗಳ ಆಯ್ಕೆಯೂ ಪೂರ್ಣಗೊಂಡಿದೆ. ಪ್ರತಿಯೊಬ್ಬ ಮತದಾರರು ಜವಾಬ್ದಾರಿಯುತವಾಗಿ ಮತದಾನ ಮಾಡುವುದರಿಂದ ಸುಭದ್ರ ಸರ್ಕಾರ, ಅಭಿವೃದ್ಧಿಯ ಪಥದಲ್ಲಿ ಕೊಂಡೊಯ್ಯುವ ಸರ್ಕಾರದ ರಚನೆಗೆ ಕಾರಣವಾಗಲಿದ್ದಾರೆ. ಆದ್ದರಿಂದ ಮತದಾನ ಹಕ್ಕನ್ನು ತಪ್ಪದೇ ಚಲಾಯಿಸಿ.**

# ಲೋಕಸಭಾ ಚುನಾವಣೆ : ಮತದಾನ ಪ್ರಮಾಣ ಹೆಚ್ಚಲಿ



ಭಾರತದ 18ನೇ ಲೋಕಸಭೆಯ 543 ಸ್ಥಾನಗಳಿಗೆ ಚುನಾವಣಾ ವೇಳಾಪಟ್ಟಿ ಪ್ರಕಟವಾಗಿದೆ. ಏಳು ಹಂತಗಳಲ್ಲಿ ನಡೆಯುವ ಮತದಾನ ಭಾರತದ ಅಭಿವೃದ್ಧಿಯ ದಿಕ್ಸೂಚಿಗೆ ಕಾರಣವಾಗಲಿದೆ.

ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆ ನಮ್ಮದು. ಪ್ರತಿವರ್ಷ ಯುವಜನರ ಸಂಖ್ಯೆಯು ಹೆಚ್ಚಳವಾಗುತ್ತಿದೆ. ಪ್ರಥಮ ಬಾರಿಗೆ ಮತದಾನದ ಹಕ್ಕು ಪಡೆಯುವ ಯುವಜನರಿಗೆ ಉತ್ಸಾಹವು ಬರಲಿದೆ. ತಮ್ಮ ಭವಿಷ್ಯದ ಸಂಸತ್ ಪ್ರತಿನಿಧಿಯನ್ನು ಆಯ್ಕೆ ಮಾಡುವ ಅವಕಾಶ ಸಿಗಲಿದೆ.

ದೇಶದ 143 ಕೋಟಿ ಜನಸಂಖ್ಯೆಯಲ್ಲಿ 96.88 ಕೋಟಿ ಮತದಾರರಿದ್ದು 49.70 ಕೋಟಿ ಪುರುಷರು, 47.15 ಕೋಟಿ ಮಹಿಳೆಯರು, ಕೆಲವೇ ಸಹಸ್ರ ಸಂಖ್ಯೆಯಲ್ಲಿ ತೃತೀಯ ಲಿಂಗಗಳು ಮತದಾನ ಮಾಡಲು ಅರ್ಹರಿದ್ದಾರೆ.

ಹೆಚ್ಚಿನ ಪ್ರಮಾಣದಲ್ಲಿ ಮತದಾರರು ಮತದಾನ ಕೇಂದ್ರಗಳಿಗೆ ತೆರಳಿ ತಮ್ಮ ಹಕ್ಕನ್ನು ಚಲಾಯಿಸಲು ಇದು ಸಕಾಲವಾಗಿದೆ. ಜೂನ್ 4ರಂದು ಫಲಿತಾಂಶ ಪ್ರಕಟವಾಗಲಿದ್ದು ಮತದಾರ ಯಾರ ಕೈ ಹಿಡಿಯಲಿದ್ದಾರೆ ಎಂದು ಸ್ಪಷ್ಟವಾಗಿ ತಿಳಿಯಲಿದೆ. ಕರ್ನಾಟಕದಲ್ಲಿ ಎರಡು ಹಂತಗಳಲ್ಲಿ 28 ಲೋಕಸಭಾ ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು ಪ್ರಮುಖ ಪಕ್ಷಗಳ ಅಭ್ಯರ್ಥಿಗಳ ಆಯ್ಕೆಯೂ ಪೂರ್ಣಗೊಂಡಿದೆ. ಪ್ರತಿಯೊಬ್ಬ ಮತದಾರರು ಜವಾಬ್ದಾರಿಯುತವಾಗಿ ಮತದಾನ ಮಾಡುವುದರಿಂದ ಸುಭದ್ರ ಸರ್ಕಾರ, ಅಭಿವೃದ್ಧಿಯ ಪಥದಲ್ಲಿ ಕೊಂಡೊಯ್ಯುವ ಸರ್ಕಾರದ ರಚನೆಗೆ ಕಾರಣವಾಗಲಿದ್ದಾರೆ. ಆದ್ದರಿಂದ ಮತದಾನ ಹಕ್ಕನ್ನು ತಪ್ಪದೇ ಚಲಾಯಿಸಲು ಪತ್ತಿನ ಮಹಾಮಂಡಳ ಮನವಿ ಮಾಡುತ್ತಿದೆ. **ಹಿಂದೂ ಪಂಚಾಂಗದ ಪ್ರಕಾರ ಏಪ್ರಿಲ್–9ರಂದು ಯುಗಾದಿ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಲಾಗುತ್ತಿದ್ದು ಸಮಸ್ತ ಸಹಕಾರಿ ಬಂಧುಗಳಿಗೆ ಯುಗಾದಿಯ ಹಾರ್ದಿಕ ಶುಭಾಶಯಗಳು.**

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀ ವಿ. ರಾಜು**

ಕಾರ್ಯನಿರ್ವಾಹಕ ಸಂಪಾದಕರು:
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ**

ಸದಸ್ಯರು : **ಡಾ॥ ಸಂಜಯ ಪಿ. ಹೊಸಮಠ**
**ಶ್ರೀ ಎಂ.ಜಿ. ನರೇಂದ್ರಕುಮಾರ**
**ಶ್ರೀ ಕೆ. ಕೃಷ್ಣಮೂರ್ತಿ**
**ಶ್ರೀ ಡಿ.ಆರ್. ನಾಗೇಶಪ್ಪ**
**ಶ್ರೀ ಹೊನ್ನಯ್ಯ ವೀ ಹಿರೇಮಠ**
**ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು :
**ಪ್ರಜ್ವಲ್ ಕೆ.ಎನ್.**
ಮುಖ್ಯಕಾರ್ಯನಿರ್ವಹಣಾಧಿಕಾರಿ




**ಗೌರವ ಸಲ್ಲಿಕೆ :** ಪತ್ತಿನ ಮಹಾಮಂಡಳದ ನಿರ್ದೇಶಕರು ಹಾಗೂ ಶ್ರೀ ಗಾಯತ್ರಿ ಪತ್ತಿನ ಸಹಕಾರ ಸಂಘ ನಿ., ಸೂಳೇಭಾವಿ, ಬಾಗಲಕೋಟೆ ಇದರ ಅಧ್ಯಕ್ಷರಾದ ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿರವರು ತಮ್ಮ ಸಹಕಾರ ಸಂಘಕ್ಕೆ ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಶ್ರೀ ವಿ.ರಾಜುರವರು, ನಿರ್ದೇಶಕರಾದ ಶ್ರೀ ಶೇಖರಗೌಡ ಮಾಲಿ ಪಾಟೀಲರವರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಪ್ರಜ್ವಲ್ ಕೆ.ಎನ್ ರವರು ಭೇಟಿ ನೀಡಿದ ಸಂದರ್ಭದಲ್ಲಿ ಸನ್ಮಾನಿಸಿದರು. ಸಂಘದ ಆಡಳಿತಮಂಡಳಿ ಸದಸ್ಯರು ಉಪಸ್ಥಿತರಿದ್ದರು.

**ಸುಭಾಷಿತ :** ನಿಮಗೆ ಸಹಾಯ ಮಾಡಿದವರನ್ನು ಮರೆಯಬೇಡಿ, ನಿಮ್ಮನ್ನು ನಂಬಿದವರನ್ನು ಎಂದೂ ಕೈಬಿಡಬೇಡಿ. – ಸ್ವಾಮಿ ವಿವೇಕಾನಂದ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1770/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಗುಜರಾತಿನ ದ್ವಾರಕಾದಲ್ಲಿ ರಾಜ್ಯಮಟ್ಟದ ಪತ್ತಿನ ಸಹಕಾರ ಸಂಘಗಳ ವಿಚಾರ ಸಂಕಿರಣ



ವೇದಿಕೆಯಲ್ಲಿ ಗುಜರಾತ್ ಕ್ರೆಡಿಟ್ ಫೆಡರೇಷನ್‌ನ ಅಧ್ಯಕ್ಷರು ಘನಶ್ಯಾಂ ಬಾಯಿ ಅಮೀನ, ಮಹಾರಾಷ್ಟ್ರ ರಾಜ್ಯ ಕ್ರೆಡಿಟ್ ಫೆಡರೇಷನ್‌ನ ಅಧ್ಯಕ್ಷರು ಕಾಕಾ ಸಾಹೇಬ್ ಕೋಯ್ತೆ, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನಿರ್ದೇಶಕರುಗಳಾದ ಡಾ॥ ಸಂಜಯ ಪಿ ಹೊಸಮಠ, ತಮ್ಮಣ್ಣ ಬಾಲಪ್ಪ ಕೆಂಚರಡ್ಡಿ, ಹೆಚ್.ಟಿ. ನಾಗೇಶ್ ಹಾಗೂ ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯದ ಇತರೆ ಗಣ್ಯರು ಉಪಸ್ಥಿತರಿದ್ದರು.

**ಗುಜರಾತ್ :** ಗುಜರಾತ್ ಸ್ಟೇಟ್ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟೀಸ್ ಫೆಡರೇಷನ್, ಅಹಮದಾಬಾದ್ ವತಿಯಿಂದ ಇತ್ತೀಚೆಗೆ ದ್ವಾರಕಾದಲ್ಲಿ ರಾಜ್ಯ ಮಟ್ಟದ ಸಹಕಾರ ಪತ್ತಿನ ಸಹಕಾರ ಸಂಘಗಳ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು. ಸೆಮಿನಾರ್‌ನಲ್ಲಿ ಗುಜರಾತ್ ಸಹಕಾರ ಮಹಾಮಂಡಳ ಮತ್ತು ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಘನಶ್ಯಾಂ ಬಾಯಿ ಅಮೀನ್ ರವರು "ಸಹಕಾರದ ಮೂಲಕ ಸಮೃದಿಗಾಗಿ–ಪತ್ತಿನ ಸಹಕಾರ ಸಂಘಗಳ ಪಾತ್ರ" ಎಂಬ ವಿಷಯದ ಬಗ್ಗೆ ಪ್ರಧಾನಮಂತ್ರಿಯವರ ಹೊಂದಿರುವ ದೃಷ್ಟಿಕೋನವನ್ನು ತಿಳಿಸಿದರು.

ಉದ್ಘಾಟನಾ ಸಮಾರಂಭವು ಮಹಾರಾಷ್ಟ್ರ ಸ್ಟೇಟ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟೀಸ್ ಫೆಡರೇಷನ್‌ನ ಅಧ್ಯಕ್ಷರಾದ ಓಂಪ್ರಕಾಶ ಕೊಯ್ತೆ ಅವರ ಗೌರವಾನ್ವಿತ ಉಪಸ್ಥಿತಿಗೆ ಸಾಕ್ಷಿಯಾಯಿತು. ಸಹಕಾರಿ ಚಟುವಟಿಕೆಗಳನ್ನು ಉತ್ತೇಜಿಸುವಲ್ಲಿ, ಗುಜರಾತ್, ಮಹಾರಾಷ್ಟ್ರ ಮತ್ತು ಕರ್ನಾಟಕದಂತಹ ರಾಜ್ಯಗಳ ನಡುವೆ ಪರಸ್ಪರ ಸಹಕಾರದ ಮಹತ್ವವನ್ನು ಕೊಯ್ತೆ ರವರು ಎತ್ತಿಹಿಡಿದರು. ಸಹಕಾರಿ ಕ್ಷೇತ್ರದಲ್ಲಿ ಸಹಕಾರ ಮತ್ತು ಅಭಿವೃದ್ಧಿಯನ್ನು ಇನ್ನಷ್ಟು ಹೆಚ್ಚಿಸಲು ರಾಷ್ಟ್ರೀಯ ಮಟ್ಟದ ಸಹಕಾರ ಮಹಾಮಂಡಳ ರಚನೆಗೆ ಪ್ರಸಾವನೆ ಸಲ್ಲಿಸಿದರು. ಸಂಸ್ಥಾಪಕ ಅಧ್ಯಕ್ಷರಾದ ಘನಶ್ಯಾಂ ಬಾಯ್ ಅಮೀನ್ ರವರು ಸಾಮಾಜಿಕ ಆರ್ಥಿಕ ಅಭಿವೃದ್ಧಿಯಲ್ಲಿ ಪತ್ತಿನ ಸಹಕಾರ ಕ್ಷೇತ್ರದ ಪ್ರಮುಖ ಪಾತ್ರವನ್ನು ವಿವರಿಸಿದರು.

ಮಾನ್ಯ ಗೃಹ ಮತ್ತು ಸಹಕಾರ ಕೇಂದ್ರ ಸಚಿವರಾದ ಅಮಿತ್ ಶಾ ರವರು. ಗುಜರಾತ್‌ನಲ್ಲಿ 6300ಕ್ಕು ಹೆಚ್ಚು, ಮಹಾರಾಷ್ಟ್ರದಲ್ಲಿ 16000ಕ್ಕೂ ಹೆಚ್ಚು ಮತ್ತು ಕರ್ನಾಟಕ ರಾಜ್ಯದಲ್ಲಿ 5000ಕ್ಕೂ ಹೆಚ್ಚು ಸಹಕಾರ ಸಂಘಗಳಿರುತ್ತವೆ. ಸಣ್ಣ ಮತ್ತು ಮಧ್ಯಮ ವರ್ಗದ ರೈತರ ಅನುಕೂಲಕ್ಕಾಗಿ ಎರಡು ಲಕ್ಷ ಪತ್ತಿನ ಸಹಕಾರ ಸಂಘಗಳನ್ನು ಸ್ಥಾಪಿಸುವುದಾಗಿ ತಿಳಿಸಿದರು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನಿರ್ದೇಶಕರಾದ ಡಾ॥ಸಂಜಯ ಪಿ ಹೊಸಮಠರವರು ಪತ್ತಿನ ಸಹಕಾರ ಸಂಘಗಳು ಎದುರಿಸುತ್ತಿರುವ ಸವಾಲುಗಳನ್ನು ಎದುರಿಸಲು ರಾಷ್ಟ್ರೀಯ ಮಟ್ಟದ ಒಕ್ಕೂಟದ ರಚನೆಗೆ ಪ್ರತಿಪಾದಿಸಿದರು. ಪ್ರಧಾನ ಮಂತ್ರಿಗಳು ರೂಪಿಸಿದ ಆರ್ಥಿಕ ದೃಷ್ಟಿಕೋನವನ್ನು ಸಾಕಾರಗೊಳಿಸುವಲ್ಲಿ ಅದರ ನಿರ್ಣಾಯಕ ಪಾತ್ರವನ್ನು ಹಾಗೂ ಸಹಕಾರ ಕ್ಷೇತ್ರದಿಂದ 5 ಟ್ರಿಲಿಯನ್ ಆರ್ಥಿಕತೆಯನ್ನು ಸಾಧಿಸುವ ಪ್ರಧಾನಮಂತ್ರಿಯವರ ದೃಷ್ಟಿಕೋನವನ್ನು ಪ್ರತಿಧ್ವನಿಸಿದರು.

ಈ ಸೆಮಿನಾರ್ ತಜ್ಞರ ನೇತೃತ್ವದ ಅಧಿವೇಶನಗಳಿಗೆ ಸಾಕ್ಷಿಯಾಯಿತು. ಪುಣೆಯ ವಾಮ್ನಿಕಾಮ್‌ನ ಶ್ರೀ ಮೈ ಎಸ್.ಪಾಟೀಲ್ ಅವರು ಸಹಕಾರ ಸಂಘಗಳನ್ನು ನವೀಕರಿಸುವಲ್ಲಿ ಮಾಹಿತಿ ತಂತ್ರಜ್ಞಾನದ ಮಹತ್ವದ ಕುರಿತು ಚರ್ಚಿಸಿದರು. ಮೈಕ್ರೋನ್ಯುರ್‌ನ ಶ್ವೇತ ಬರ್ವೆ ರವರು ಸಹಕಾರ ಕ್ಷೇತ್ರದಲ್ಲಿ ವಿಮೆಯ ಪ್ರಾಮುಖ್ಯತೆಯನ್ನು ವಿವರಿಸಿದರು. ಶ್ರೀ ಶ್ರೀಕಾಂತ್ ಮ್ಯುಲ್ ಆಫ್ ಪೋಸಿಟ್ ಸಾಫ್ಟ್ ವೇರ್, ಸೊ ಪ್ರೈವೇಟ್ ಲಿ., ಮತ್ತು ನೆಟ್ ವಿನ್ ಸಾಫ್ಟ್‌ನ ಶ್ರೀ ಜಿತೇಂದ್ರ ಶಾ ಅವರು ಕ್ರೆಡಿಟ್ ಸೊಸೈಟಿಗಳಿಗೆ ಪ್ರಯೋಜನಕಾರಿಯಾದ ವಿವಿಧ ಸೇವೆಗಳ ಒಳನೋಟಗಳನ್ನು ಒದಗಿಸಿದರು. ವಿಷಯ ತಜ್ಞರಾದ ಜೆ.ಜೆ.ಶಾ ರವರು ಪತ್ತಿನ ಸಹಕಾರ ಸಂಘಗಳು ತಮ್ಮ ಸದಸ್ಯರ ಕಲ್ಯಾಣಕ್ಕೆ ಆದ್ಯತೆ ನೀಡುವ ಅಗತ್ಯವನ್ನು ತಿಳಿಸಿದರು. ಸಮರ್ಥ ಕಾರ್ಯಾಚರಣೆಯನ್ನು ಖಚಿತಪಡಿಸಿಕೊಳ್ಳಲು ಸಹಕಾರಿ ಮೌಲ್ಯಗಳು, ಕಾನೂನುಗಳು ಮತ್ತು ನಿಬಂಧನೆಗಳ ಅನುಸರಣೆಗೆ ಅವರು ಒತ್ತು ನೀಡಿದರು. ಈ ವಿಚಾರ ಸಂಕಿರಣದಲ್ಲಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ಹೆಚ್.ಟಿ.ನಾಗೇಶ್ ಮತ್ತು ಶ್ರೀ ತಮ್ಮಣ್ಣ ಬಾಲಪ್ಪ ಕೆಂಚರಡ್ಡಿ ಮತ್ತು ಎಸ್.ಎಸ್ ಗಾಡ್ಗೆಯಂತಹ ಗಣ್ಯರು ಉಪಸ್ಥಿತರಿದ್ದು ಪತ್ತಿನ ಸಹಕಾರ ಸಂಘಗಳ ಪ್ರತಿನಿಧಿಗಳಿಗೆ ಮಾರ್ಗದರ್ಶನ ಮತ್ತು ಪರಿಹಾರಗಳನ್ನು ನೀಡಿದರು.

ಡಾ.ಜೀವರಾಜಭಾಯ ಗೊಧಾನಿ ಸ್ವಾಗತ ಭಾಷಣ ಮಾಡಿದರು. ಆರ್.ಎಂ.ಪಟೇಲ್ ವಂದಿಸಿದರು. ಶ್ರೀ ಅಲ್ಪೇಶ್ ಭಾಯ್ ರಾವಲ್ ರವರು ನಿರೂಪಣೆ ಮಾಡಿದರು. ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ದುಶ್ಯಂತ್ ಸಿನ್ಹಾ ವಘೇಲಾ ಅವರು ಸಿಬ್ಬಂದಿ ಮತ್ತು ಸದಸ್ಯರ ಸಹಕಾರವನ್ನು ಶ್ಲಾಘಿಸಿದರು. ಒಟ್ಟಾರೆ ಸೆಮಿನಾರ್ ಸಹಕಾರಿ ನಾಯಕರಿಗೆ ಪತ್ತಿನ ಸಹಕಾರ ಕ್ಷೇತ್ರದ ಮೂಲಕ ಸಮೃದ್ಧಿಯನ್ನು ಬೆಳೆಸಲು ಆಲೋಚನೆಗಳು ಮತ್ತು ತಂತ್ರಗಳನ್ನು ವಿನಿಮಯ ಮಾಡಿಕೊಳ್ಳಲು ವೇದಿಕೆಯಾಗಿ ಕಾರ್ಯನಿರ್ವಹಿಸಿತು.

# ಕೇಂದ್ರ ಸಚಿವ ಅಮಿತ್ ಶಾ ಅವರಿಂದ ರಾಷ್ಟ್ರೀಯ ಡೇಟಾಬೇಸ್ ಲೋಕಾರ್ಪಣೆ




**ನವದೆಹಲಿ :** ನವದೆಹಲಿಯಲ್ಲಿ ರಾಷ್ಟ್ರೀಯ ಸಹಕಾರಿ ಡೇಟಾಬೇಸ್–2023 ವರದಿ" ಬಿಡುಗಡೆ ಮಾಡಿದ ನಂತರ ಮಾತನಾಡಿದ ಕೇಂದ್ರ ಸಹಕಾರ ಸಚಿವ ಅಮಿತ್ ಶಾ ರವರು ಭಾರತದ ಸ್ವಾತಂತ್ರ ನಂತರ ಸಹಕಾರಿ ಡೇಟಾಬೇಸ್‌ನ ಉದ್ಘಾಟನೆ ಮೊದಲ ಬಾರಿಗೆ ನಡೆಯುತ್ತಿದೆ. ಸಹಕಾರಿ ಕ್ಷೇತ್ರ ಅದರ ವಿಸ್ತರಣೆ ಮತ್ತು ಬಲವರ್ಧನೆಗೆ ಇದು ಒಂದು ಮೈಲಿಗಲ್ಲು ಈ ಡೇಟಾಬೇಸ್ ಸಹಕಾರ ಕ್ಷೇತ್ರಕ್ಕೆ ದಿಕ್ಸೂಚಿಯಾಗಿ ಕಾರ್ಯನಿರ್ವಹಿಸಲಿದೆ ಡೇಟಾಬೇಸ್‌ನ ತಯಾರಿಕೆಯಲ್ಲಿ ಎನ್‌ಸಿಯೂಐ ಪಾತ್ರವನ್ನು ಶ್ಲಾಘಿಸಿದರು.

ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಕಂಪ್ಯೂಟರೀಕರಣಗೊಳಿಸುವ ಯೋಜನೆಯ ನಂತರ ಅಂತರಗಳ ಬಗ್ಗೆ ಖಚಿತವಾಗಿರದ ಕಾರಣ ಸವಾಲು ಉದ್ಭವಿಸಿತು ಮತ್ತು ಈ ಡೇಟಾಬೇಸ್‌ನ ಕಲ್ಪನೆಯು ಹೊರಹೊಮ್ಮಿತು. ಡೇಟಾಬೇಸ್ ಸಮಗ್ರ ವಿಶ್ಲೇಷಣೆಯ ಮೂಲಕ ಅಂತರವನ್ನು ಗುರುತಿಸುವ ಮತ್ತು ಪರಿಹರಿಸುವ ಗುರಿಯನ್ನು ಹೊಂದಿದೆ. ರಾಷ್ಟ್ರೀಯ ದಿಕ್ಸೂಚಿಯಂತೆ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ನಿರ್ದೇಶನ ನೀಡಲಿದೆ ಎಂದರು.

ಸಹಕಾರಿ ಡೇಟಾಬೇಸ್ ಸಹಕಾರಿಗಳ ವಿಸ್ತರಣೆ, ಡಿಜಿಟಲ್ ಅಭಿವೃದ್ಧಿ ಮತ್ತು ಡೇಟಾಬೇಸ್‌ನ ಮೂಲಕ ವಿತರಣೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಅಭಿವೃದ್ಧಿಯನ್ನು ಸರಿಯಾದ ದಿಕ್ಕಿನಲ್ಲಿ ಮಾರ್ಗದರ್ಶನ ಮಾಡಲು ಡೇಟಾ ಕಾರ್ಯನಿರ್ವಹಿಸುತ್ತದೆ ಮತ್ತು ಅಂತರವನ್ನು ವಿಶ್ಲೇಷಿಸುವಲ್ಲಿ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ ಈ ಡೇಟಾಬೇಸ್ ಆಡಳಿತ, ಪೂರ್ವ ಭಾವಿ ಆಡಳಿತ ಮತ್ತು ನಿರೀಕ್ಷಿತ ಆಡಳಿತ ಈ ಮೂರು ಪ್ರಕ್ರಿಯೆಗಳಿಂದ ಹೊಸ ಅಭಿವೃದ್ಧಿ ಮಾದರಿಯ ಸ್ಥಾಪನೆಗೆ ಕಾರಣವಾಗುತ್ತದೆ ಎಂದರು.

ರಾಷ್ಟ್ರೀಯ ಸಹಕಾರಿ ಡೇಟಾಬೇಸ್‌ನ ಕಾರ್ಯವನ್ನು ಮೂರು ಹಂತಗಳಲ್ಲಿ ಕೈಗೊಳ್ಳಲಾಗಿದೆ. ಮೊದಲ ಹಂತದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಡೈರಿ ಮತ್ತು ಮೀನುಗಾರಿಕೆ ಎಂಬ ಮೂರು ವಲಯಗಳಲ್ಲಿ ಅಂದಾಜು 2.64 ಲಕ್ಷ ಸಹಕಾರ ಸಂಘಗಳ ಮ್ಯಾಪಿಂಗ್ ಪೂರ್ಣಗೊಂಡಿದೆ.

ಎರಡನೇ ಹಂತದಲ್ಲಿ ವಿವಿಧ ರಾಷ್ಟ್ರೀಯ ಒಕ್ಕೂಟಗಳು, ರಾಜ್ಯ ಒಕ್ಕೂಟಗಳು ರಾಜ್ಯ ಸಹಕಾರಿ ಬ್ಯಾಂಕುಗಳು (STCB), ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು (DCCB), ನಗರ ಸಹಕಾರಿ ಬ್ಯಾಂಕುಗಳು (UCB), ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು (SCARDB), ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣಾಭಿವ್ರದ್ಧಿ ಬ್ಯಾಂಕುಗಳು (PCARDB), ಸಹಕಾರಿ ಸಕ್ಕರೆ ಕಾರ್ಖಾನೆಗಳು, ಜಿಲ್ಲಾ ಒಕ್ಕೂಟಗಳು ಮತ್ತು ಬಹು ರಾಜ್ಯ ಸಹಕಾರ ಸಂಘಗಳ (MSCS) ಮ್ಯಾಪ್ ಮಾಡಲಾಗಿದೆ.




ಮೂರನೇ ಹಂತದಲ್ಲಿ ಉಳಿದ ಎಲ್ಲಾ 8 ಲಕ್ಷ ಪ್ರಾಥಮಿಕ ಸಹಕಾರ ಸಂಘಗಳ ಡೇಟಾ ಮ್ಯಾಪಿಂಗ್ ಅನ್ನು ಇತರ ವಲಯಗಳಲ್ಲಿ ನಡೆಸಲಾಯಿತು. ಇದರ ನಂತರ ದೇಶದಲ್ಲಿ 8 ಲಕ್ಷಕ್ಕೂ ಹೆಚ್ಚು ನೋಂದಾಯಿತ ಸಹಕಾರ ಸಂಘಗಳಿದ್ದು 30 ಕೋಟಿಗೂ ಹೆಚ್ಚು ನಾಗರೀಕರು ಸದಸ್ಯತ್ವ ಪಡೆದು ಸಹಕಾರ ಸಂಘಗಳ



ದಿನಾಂಕ : 27.03.2024ರಂದು ನಡೆದ ಆಡಳಿತ ಮಂಡಳಿ ತುರ್ತು ಸಭೆಯಲ್ಲಿ ಪತ್ತಿನ ಸಹಕಾರ ಸಂಘಗಳಿಗೆ ಸಂಬಂಧಿಸಿದ ಸರ್ಕಾರದ ಆದೇಶವನ್ನು ಹಿಂಪಡೆಯಲು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ತೀರ್ಮಾನಿಸಲಾಯಿತು. ನಂತರ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಪತ್ತಿನ ಮಹಾಮಂಡಳವು ಮನವಿ ಸಲ್ಲಿಸಿದೆ.

ಸೌಲಭ್ಯವನ್ನು ಉಪಯೋಗಿಸಿಕೊಳ್ಳುತ್ತಿರುವ ಬಗ್ಗೆ ಕಂಡು ಬಂದಿರುವ ಬಗ್ಗೆ ಪ್ರಸ್ತಾಪಿಸಿದರು.

ಸಹಕಾರ ಸಂಘಗಳಿಗೆ ಹಳ್ಳಿಗಳಿಂದ ನಗರಗಳಿಗೆ ಜಾಗತಿಕ ಮಾರುಕಟ್ಟೆಗೆ ಮತ್ತು ರಾಜ್ಯ ಡೇಟಾಬೇಸ್‌ಗಳನ್ನು ಅಂತರಾಷ್ಟ್ರೀಯ ಡೇಟಾಬೇಸ್‌ಗಳಿಗೆ ಸಂಪರ್ಕಿಸುವ ಸಾಮರ್ಥ್ಯವನ್ನು ಡೇಟಾಬೇಸ್ ಹೊಂದಿದೆ. ಸರ್ಕಾರವು ಪ್ರಾರಂಭಿಸಿದ ಸಹಕಾರಿ ಸಂಸ್ಥೆಗಳ ವಿಸ್ತರಣೆಯ ಅಭಿಯಾನದಲ್ಲಿ ಈ ಡೇಟಾಬೇಸ್ ಸಹಕಾರಿ ಕ್ಷೇತ್ರದ ಪ್ರಗತಿಗೆ ದಾರಿ ಮಾಡಿಕೊಡುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಡೈನಮಿಕ್ ವೆಬ್ ಆಧಾರಿತ ಫ್ಲಾಟ್ ಫಾರ್ಮ್ ಅನ್ನು ಒಳಗೊಂಡಿರುವ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಈ ರಾಷ್ಟ್ರೀಯ ಡೇಟಾಬೇಸನ್ನು ರಚಿಸಲಾಗಿದೆ. ಈ ವೇದಿಕೆಯ ಸಹಾಯದಿಂದ ದೇಶಾದ್ಯಂತ ನೋಂದಾಯಿತ ಸಹಕಾರಿ ಸಂಘಗಳ ಬಗ್ಗೆ ಎಲ್ಲಾ ಮಾಹಿತಿಯು ಲಭ್ಯವಿರುತ್ತದೆ. ಈ ಸಹಕಾರಿ ಡೇಟಾಬೇಸ್ ಸಂಶೋಧಕರು, ಮದ್ಯಸ್ಥಗಾರರಿಗೆ ಅಮೂಲ್ಯವಾದ ಸಂಪನ್ಮೂಲವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಉಲ್ಲೇಖಿಸಲಾಗಿದೆ. ಈ ಡೇಟಾಬೇಸ್‌ನಲ್ಲಿರುವ ಡೇಟಾದ ದೃಢೀಕರಣ ಮತ್ತು ಅದರ ನಿಯಮಿತ ನವೀಕರಣಗಳನ್ನು ಸಮಗ್ರ ವೈಜ್ಞಾನಿಕ ವ್ಯವಸ್ಥೆಯ ಮೂಲಕ ಖಚಿತಪಡಿಸಿಕೊಳ್ಳಲಾಗುತ್ತದೆ. ಈ ಡೇಟಾಬೇಸ್ ಪರಿಶೀಲಿಸಿದ ಡೇಟಾವನ್ನು ಮಾತ್ರ ನಿಯಮಿತವಾಗಿ ಅಪ್‌ಲೋಡ್ ಮಾಡುವುದನ್ನು ಸಹಕಾರ ಸಚಿವಾಲಯ ಖಚಿತಪಡಿಸುವುದಾಗಿ ಭರವಸೆ ನೀಡಿದರು. 1960ರ ದಶಕದ ನಂತರ ರಾಷ್ಟ್ರೀಯ ನೀತಿಯಡಿಯಲ್ಲಿ ಪ್ರತಿ ರಾಜ್ಯದ ಸಹಕಾರ ಚಳುವಳಿಯಲ್ಲಿ ಸಮನ್ವಯತೆಯ ಅಗತ್ಯವಿದೆ ಕಳೆದ ಎರಡು ವರ್ಷಗಳಲ್ಲಿ ದೇಶದ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಗಣಕೀಕರಣಗೊಳಿಸಲಾಗಿದೆ. ಮತ್ತು ಎಲ್ಲಾ ರಾಜ್ಯಗಳು ತಮ್ಮ ವ್ಯವಹಾರವನ್ನು ಹೆಚ್ಚಿಸಲು ಒಪ್ಪಿಕೊಂಡಿವೆ 2027ರ ವೇಳೆಗೆ ದೇಶದ ಪ್ರತಿ ಹಳ್ಳಿಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಇರಬೇಕೆಂದು ನಿರ್ಧರಿಸಲಾಗಿದೆ.

1975ರ ನಂತರ ಅಭಿವೃದ್ಧಿಯಲ್ಲಿ ಭೌಗೋಳಿಕ ಅಸಮತೋಲನದಿಂದಾಗಿ ದೇಶದಲ್ಲಿ ಸಹಕಾರ ಚಳುವಳಿಯ ವೇಗವು ನಿಧಾನವಾಯಿತು. ಇದರೊಂದಿಗೆ ವಲಯದಾದ್ಯಂತ ಅಸಮತೋಲನ, ಸಮುದಾಯದ ಅಸಮತೋಲನ ಮತ್ತು ಕ್ರಿಯಾತ್ಮಕ ಅಸಮತೋಲನವೂ ಹೆಚ್ಚಿದೆ. ಆದಾಗ್ಯೂ ಈ ನಾಲ್ಕು ಸಮಸ್ಯೆಗಳನ್ನು ಪರಿಹರಿಸುವ ಸಾಧನಗಳನ್ನು ಈ ಡೇಟಾಬೇಸ್‌ನಲ್ಲಿ ಅಳವಡಿಸಲಾಗಿದೆ. ಭವಿಷ್ಯದಲ್ಲಿ ಇಂದು ಬಲವಾದ ಸಹಕಾರಿ ರಚನೆಯ ಅಡಿಪಾಯವಾಗಿದೆ ಸಹಕಾರ ಸಚಿವರು ತಿಳಿಸಿದರು.

ಈ ಸಂದರ್ಭದಲ್ಲಿ ಸಹಕಾರಿ ಕ್ಷೇತ್ರದ ಪ್ರಮುಖರಾದ ದಿಲೀಪ್ ಸಂಘಾನಿ, ಬಿಜೇಂದರ್ ಸಿಂಗ್, ಡಾ. ಯು.ಎಸ್. ಅವಸ್ತಿ. ಶ್ರೀ ಬಿ.ಎಲ್. ವರ್ಮಾ ಮತ್ತು ಕಾರ್ಯದರ್ಶಿ, ಸಹಕಾರ ಸಚಿವಾಲಯ ಡಾ ಅಶಿಶ್ ಕುಮಾರ್ ಭೂತಾನಿ, ಕಾರ್ಯಾಗಾರದಲ್ಲಿ ಪ್ರತಿನಿಧಿಗಳಾಗಿ ಪತ್ತಿನ ಮಹಾಮಂಡಳದ ನಿರ್ದೇಶಕರುಗಳಾದ ಡಾ. ಸಂಜಯ ಪಿ. ಹೊಸಮಠ, ಎಚ್.ಟಿ. ನಾಗೇಶ್ ಹಾಗೂ ಶ್ರೀ ಚಿತ್ತರಂಜನ್ ಬೋಳಾರ್ ಭಾಗವಹಿಸಿದ್ದರು.

### ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಚಿಂತನ–ಮಂಥನ ಕಾರ್ಯಾಗಾರ

## ಸರ್ಕಾರದ ಯೋಜನೆಗಳು ಫಲಾನುಭವಿಗಳಿಗೆ ತಲುಪಬೇಕು

# ಇಲಾಖಾಧಿಕಾರಿಗಳ ಕಾರ್ಯದಕ್ಷತೆ ಅತ್ಯಂತ ಮಹತ್ವದ್ದು : ಕ್ಯಾಪ್ಟನ್ ಡಾ. ಕೆ. ರಾಜೇಂದ್ರ

**ಮಡಿಕೇರಿ** : ಸಹಕಾರ ಇಲಾಖೆಯ ಮೂಲಕ ಸರ್ಕಾರದ ಯೋಜನೆಗಳನ್ನು ಫಲಾನುಭವಿಗಳಿಗೆ ತ್ವರಿತಗತಿಯಲ್ಲಿ ತಲುಪಿಸಲು ಇಲಾಖಾಧಿಕಾರಿಗಳ ಕಾರ್ಯದಕ್ಷತೆ ಅತ್ಯಂತ ಮಹತ್ವದ್ದು. ಈ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸುವುದರ ಜೊತೆಗೆ ಸಾರ್ವಜನಿಕರ ವಿಶ್ವಾಸ, ನಂಬಿಕೆಗೆ ಪಾತ್ರರಾಗಬೇಕು ಎಂದು ಸಹಕಾರ ಸಂಘಗಳ ನಿಬಂಧಕರಾದ ಕ್ಯಾಪ್ಟನ್ ಡಾ. ಕೆ. ರಾಜೇಂದ್ರ ಅವರು ತಿಳಿಸಿದರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಮತ್ತು ಸಹಕಾರ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಏರ್ಪಡಿಸಿದ್ದ ರಾಜ್ಯಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರ ಸಹಕಾರ ಸಚಿವಾಲಯ ಆರಂಭಿಸಿದ ನಂತರ ಕೈಗೊಂಡ ಕ್ರಮಗಳು ಹಾಗೂ ರಾಜ್ಯ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವ ಕಾರ್ಯವನ್ನು ಅಧಿಕಾರಿಗಳು ದಕ್ಷತೆಯಿಂದ ನಿರ್ವಹಿಸಿದಾಗ ಸಾರ್ವಜನಿಕರಲ್ಲಿ ಇಲಾಖೆಯ ಬಗ್ಗೆ ಹೆಚ್ಚು ಅಭಿಮಾನ ಮೂಡುತ್ತದೆ. ಸಹಕಾರ ಇಲಾಖೆಯಲ್ಲಿ ದಾಖಲೆಗಳ ಡಿಜಟಲೀಕರಣ, ಮೂಲಭೂತ ಸೌಲಭ್ಯಗಳ ಅಭಿವೃದ್ಧಿ, ಕೃಷಿ ಪತ್ತಿನ ವ್ಯವಸ್ಥೆ ಬಲವರ್ಧನೆಗೆ ಹೆಚ್ಚಿನ ಒತ್ತು, ಯಶಸ್ವಿನಿ ಯೋಜನೆಯ ಮರುಜಾರಿ ಇಂತಹ ವಿವಿಧ ಯೋಜನೆಗಳು ಜನರಿಗೆ ತಲುಪುತ್ತಿವೆ ಎಂದರು.

ಸರ್ಕಾರದ ಯೋಜನೆಗಳನ್ನು ಸಹಕಾರ ಇಲಾಖೆಯ ಮೂಲಕ ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಅಧಿಕಾರಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಂಕಲ್ಪ ಹೊಂದಬೇಕು ಎಂದು ಅವರು ಕಿವಿಮಾತು ಹೇಳಿದರು.

ಕಾರ್ಯಕ್ರಮದ ಆರಂಭದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಸ್. ನವೀನ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಸಹಕಾರ ಮಹಾಮಂಡಳದ ಮೂಲ ಉದ್ದೇಶಗಳಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಚಾರಕ್ಕೆ ಹೆಚ್ಚಿನ ಒತ್ತು ನೀಡುವುದರ ಮೂಲಕ ಸಹಕಾರ ಚಳವಳಿಯನ್ನು ಬಲಪಡಿಸುವ ಕೆಲಸ ಮಾಡಲಾಗುತ್ತಿದೆ. ತರಬೇತಿ ನಿರಂತರ ಪ್ರಕ್ರಿಯೆಯಾಗಿದ್ದು, ವಿಷಯಗಳ ಪುನರ್‌ಮನನ ಮತ್ತು ಪ್ರಮುಖ ವಿಷಯಗಳ ಕುರಿತು ಚರ್ಚಿಸಲು ಸಹಕಾರ ತರಬೇತಿ ಕಾರ್ಯಕ್ರಮ ಪೂರಕವಾಗಿದೆ ಎಂದರು.

ಮಹಾಮಂಡಳದ ಕಾರ್ಯದರ್ಶಿ ಲಕ್ಷ್ಮೀಪತಯ್ಯ ಅವರು ಸ್ವಾಗತ




ಭಾಷಣದಲ್ಲಿ ಮಹಾಮಂಡಳದ ಶಿಕ್ಷಣ, ತರಬೇತಿಯಿಂದ ಪ್ರತಿವರ್ಷ 50 ಸಾವಿರಕ್ಕೂ ಅಧಿಕ ಸಹಕಾರಿಗಳಿಗೆ ಮತ್ತು ಸಹಕಾರ ಸಂಸ್ಥೆಗಳ ಸಿಬ್ಬಂದಿಗಳಿಗೆ ತರಬೇತಿ ನೀಡಲಾಗುತ್ತಿದೆ ಹಾಗೂ ಸಹಕಾರಿಗಳಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಸಹಕಾರ ವಾರಪತ್ರಿಕೆಯನ್ನು ಪ್ರಕಟಿಸಲಾಗುತ್ತಿದೆ. ಸಹಕಾರ ವಾರಪತ್ರಿಕೆ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ದೇಶದ ಏಕೈಕ ವಾರಪತ್ರಿಕೆ ಎಂದು ತಿಳಿಸಿದರು.

ನಂತರ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಸಹಕಾರ ಸಂಘಗಳ ನಿಬಂಧಕರಾದ ಕ್ಯಾಪ್ಟನ್ ಡಾ. ಕೆ. ರಾಜೇಂದ್ರ ಅವರು ಕೇಂದ್ರ ಸರ್ಕಾರದ ಇತ್ತೀಚಿನ ಯೋಜನೆಗಳು ಮತ್ತು ಅವುಗಳ ಅನುಷ್ಠಾನ ಕುರಿತು ಹಾಗೂ ರಾಜ್ಯ ಸರ್ಕಾರದ ಯೋಜನೆಗಳ ಅನುಷ್ಠಾನ ಕುರಿತು ಉಪನ್ಯಾಸ ನೀಡಿದರು. ಸಹಕಾರ ಸಂಘಗಳ ಅಪರ ನಿಬಂಧಕರಾದ ಎಸ್.ಎನ್. ಅರುಣ್‌ಕುಮಾರ್ ಅವರು ಸಹಕಾರ ಸಂಘಗಳಿಗೆ ಸಂಬಂಧಿಸಿದ ಗಮನಾರ್ಹ ತೀರ್ಪುಗಳ ಕುರಿತು ಚರ್ಚಿಸಿ, ಉಪನ್ಯಾಸ ನೀಡಿದರು. ಸಹಕಾರ ಸಂಘಗಳ ಅಪರ ನಿಬಂಧಕರಾದ ಗುರುಸ್ವಾಮಿ ಅವರು ಸಹಕಾರ ಸಂಘಗಳ ಕಾಯ್ದೆ ಕಲಂ 64ರ ವಿಚಾರಣೆ, ಕಲಂ 65, ಕಲಂ 68 ಮತ್ತು ಕಲಂ 70ರ ಕುರಿತು ಸುಧೀರ್ಘವಾಗಿ ಮಾತನಾಡಿದರು.

ಯಶಸ್ವಿನಿ ಟ್ರಸ್ಟಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಎಂ. ವೆಂಕಟಸ್ವಾಮಿ ಅವರು ಯಶಸ್ವಿನಿ ಯೋಜನೆಯ ಇತ್ತೀಚಿನ ಬೆಳವಣಿಗೆಗಳು ಹಾಗೂ ನೆಟ್‌ವರ್ಕ್ ಆಸ್ಪತ್ರೆಗಳು ಮತ್ತು ಶಸ್ತ್ರಚಿಕಿತ್ಸೆಗಳ ಕುರಿತು ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಒತ್ತಡ ನಿರ್ವಹಣೆ ಕುರಿತು ಸಂಪನ್ಮೂಲ ವ್ಯಕ್ತಿ ಎ.ಎಚ್. ಸಾಗರ್ ಅವರು ಉಪನ್ಯಾಸ ನೀಡಿದರು.

## ಶಿವಮೊಗ್ಗದಲ್ಲಿ ಶಿಕ್ಷಣ ತರಬೇತಿ ಕಾರ್ಯಕ್ರಮ

# ದೇಶದ ಆರ್ಥಿಕ ಅಭಿವೃದ್ಧಿಗೆ ಸಹಕಾರಿ ಕ್ಷೇತ್ರ ಅಪಾರ ಕೊಡುಗೆಗಳನ್ನು ನೀಡಿದೆ : ಚನ್ನಬಸಪ್ಪ




**ಶಿವಮೊಗ್ಗ :** ದೇಶದ ಆರ್ಥಿಕ ಅಭಿವೃದ್ಧಿಗೆ ಸಹಕಾರಿ ಕ್ಷೇತ್ರ ಅಪಾರ ಕೊಡುಗೆಗಳನ್ನು ನೀಡಿದೆ ಎಂದು ಶಾಸಕ ಚನ್ನಬಸಪ್ಪ ತಿಳಿಸಿದರು.

ಅವರು ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದಿಂದ ನಗರದ ಶುಭಮಂಗಳ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಒಂದು ದಿನದ ಶೈಕ್ಷಣಿಕ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿದರು.

ಸಾಕಷ್ಟು ಸಹಕಾರಿ ಜನಪ್ರತಿನಿಧಿಗಳು ಸಹಕಾರಿ ಕ್ಷೇತ್ರದಿಂದಲೇ ತಮ್ಮ ನಾಯಕತ್ವವನ್ನು ರೂಪಿಸಿಕೊಂಡವರು. ಆದ್ದರಿಂದ ಸಾಕಷ್ಟು ಅಭಿವೃದ್ಧಿ ಕ್ಷೇತ್ರಗಳಿಗೆ ಸಹಕಾರಿ ಕ್ಷೇತ್ರ ಬಹಳ ಮಹತ್ವವನ್ನು ಹೊಂದಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ವಿ. ರಾಜುರವರು ಪತ್ತಿನ ಸಹಕಾರ ಸಂಘಗಳ ಕಾರ್ಯ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು ಹಾಗೂ ಆ ಸಂಘಗಳ ಪದಾಧಿಕಾರಿಗಳ, ನಿರ್ದೇಶಕರ ಮತ್ತು ನೌಕರ ವರ್ಗದವರಿಗೆ, ಸಹಕಾರ ಕಾಯ್ದೆ, ನಿಯಮಗಳು ಕುರಿತಂತೆ ತರಬೇತಿ ಕಾರ್ಯಕ್ರಮಗಳನ್ನು ನೀಡುವುದಲ್ಲದೇ, ತನ್ನ ಸದಸ್ಯರಿಗೆ ಅಗತ್ಯವಿರುವ ಬ್ಯಾಂಕಿಂಗ್ ವ್ಯವಹಾರ ಠೇವಣಿ ಮತ್ತು ಉಳಿತಾಯ ಖಾತೆಗಳನ್ನು ನಿರ್ವಹಿಸುವ ಸಂಘಗಳಿಗೆ ಈ ಮಹಾಮಂಡಳವು ಸೂಕ್ತ ಮಾಹಿತಿ ಒದಗಿಸುತ್ತಿದೆ. ಒಟ್ಟಿನಲ್ಲಿ, ಪತ್ತಿನ ಸಹಕಾರ ಸಂಘಗಳ ಅಭಿವೃದ್ದಿ ಮಹಾಮಂಡಳದ ಪ್ರಮುಖ ಉದ್ದೇಶವಾಗಿದೆ ಎಂದರು.

ಮಹಾಮಂಡಳದಲ್ಲಿ ಆಜೀವ ಸದಸ್ಯತ್ವ, ಅಜೀವ ಸಹಸದಸ್ಯ, ಅಜೀವ ನಾಮಮಾತ್ರ ಸದಸ್ಯತ್ವ ಪಡೆದುಕೊಳ್ಳಲು ಅವಕಾಶವಿದೆ. ಅದರಂತೆ 2196 ಸಂಘಗಳು ಈಗಾಗಲೇ ಸದಸ್ಯತ್ವ ಪಡೆದಿರುತ್ತವೆ. ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಂದ ಒಟ್ಟು 309 ಸಹಕಾರ ಸಂಘಗಳು ಸದಸ್ಯತ್ವ ಪಡೆದಿರುತ್ತವೆ ಎಂದು ತಿಳಿಸಿದರು.

ರಾಜ್ಯಾದಾದ್ಯಂತ 1854 ಇ-ಸ್ಟಾಂಪಿಂಗ್ ಕೇಂದ್ರಗಳಿಗೆ ಛಾಪಾ ಕಾಗದಗಳನ್ನು ಮುದ್ರಿಸಲು ಪರವಾನಗಿಗಳನ್ನು ಮಂಜೂರು ಮಾಡಿಸಿಕೊಟ್ಟಿದೆ. ಶಿವಮೊಗ್ಗ 31 ದಾವಣಗೆರೆ 40, ಚಿತ್ರದುರ್ಗ 19, ತುಮಕೂರು 42, ಕೋಲಾರ 40, ಚಿಕ್ಕಬಳ್ಳಾಪುರ 24 ಜಿಲ್ಲೆಗಳಿಂದ ಒಟ್ಟು 196 ಇ-ಸ್ಟಾಂಪಿಂಗ್ ಕೇಂದ್ರಗಳನ್ನು ಹೊಂದಿದೆ. ಇದೇ ರೀತಿ ಶಿಕ್ಷಣ ತರಬೇತಿ, ವೆಬ್‌ಸೈಟ್, ಮಹಾಮಂಡಳಕ್ಕೆ ಪ್ರತ್ಯೇಕ ಶಿಕ್ಷಣ ನಿಧಿ ನೀಡಲು ಸಹಕಾರಿ ಸಚಿವರಿಗೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು. ಆರ್.ಐ.ಸಿ.ಎಂ.ನ ನಿವೃತ್ತ ಅಧಿಕಾರಿ ಬಿ. ವಸಂತ ನಾಯ್ಕ್ ಅವರು ವಿಶೇಷ ಮಾಹಿತಿ ನೀಡಿದರು.

ಶ್ರೀಮತಿ ಸುಮ ಆರ್.ವಿ, ಶಾಖಾ ವ್ಯವಸ್ಥಾಪಕರು, ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿ., ಬೆಂಗಳೂರು ಇವರು ಇ-ಸ್ಟಾಂಪಿಂಗ್ ಸ್ಟ್ಯಾಂಪ್ ಡ್ಯೂಟಿಯಲ್ಲಿ ಇತ್ತೀಚೆಗೆ ಆಗಿರುವ ಬದಲಾವಣೆಗಳ ಬಗ್ಗೆ ಉಪನ್ಯಾಸ, ಶ್ರೀ ಹೆಚ್.ಎಸ್.ನಾಗರಾಜಯ್ಯ ಇವರು "ಪತ್ತಿನ ಸಹಕಾರ ಸಂಘಗಳ ಸಬಲೀಕರಣ ಮತ್ತು ಒತ್ತಡ ಹಾಗು ಸಮಯ ನಿರ್ವಹಣೆ ಬಗ್ಗೆ" ಶ್ರೀ ಬಿ.ವಿ. ರವೀಂದ್ರನಾಥ್, ಚಾರ್ಟೆಡ್ ಅಕೌಂಟೆಂಟ್ ಸಾಗರ, ಶಿವಮೊಗ್ಗ ಇವರು "ಸಹಕಾರ ಸಂಘಗಳ ಆದಾಯ ತೆರಿಗೆ ಹಾಗೂ ಸರಕು ಮತ್ತು ಸೇವಾ ತೆರಿಗೆ ಕುರಿತು" ಕುರಿತು ಉಪನ್ಯಾಸ ನೀಡಿದರು.

ಪದವೀಧರರ ಸಹಕಾರ ಸಂಘದ ಅಧ್ಯಕ್ಷ ಎಸ್.ಪಿ. ದಿನೇಶ್, ಮಲೆನಾಡು ಕ್ರೆಡಿಟ್ ಸೊಸೈಟಿಯ ಕೆ.ಎನ್.ರಾಮಕೃಷ್ಣ ರವರು ಹಾಗೂ ಮಹಾಮಂಡಳದ ನಿರ್ದೇಶಕರುಗಳಾದ ಡಾ. ಬಿ.ಡಿ.ಭೂಕಾಂತ, ಮಲ್ಲಿಕಾರ್ಜುನಯ್ಯ, ಡಿ.ಆರ್. ನಾಗೇಶಪ್ಪ ಇನ್ನಿತರರಿದ್ದರು. ಶ್ರೀಮತಿ ಆಶಾ.ಡಿ ಪ್ರಾರ್ಥಿಸಿದರು. ನಿರ್ದೇಶಕರಾದ ಬಿ.ಡಿ. ಭೂಕಾಂತ್ ಸ್ವಾಗತಿಸಿ, ಮುಖ್ಯಕಾರ್ಯನಿರ್ವಹಣಾಧಿಕಾರಿ ಪ್ರಜ್ವಲ್ ಕೆ.ಎನ್ ವಂದಿಸಿದರು. ಶ್ರೀಮತಿ ಆಶಾಲತಾ ಪಿ. ಕಾರ್ಯಕ್ರಮ ನಿರೂಪಿಸಿದರು.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ : ಸಾರ್ವತ್ರಿಕ ಲೋಕಸಭಾ ಚುನಾವಣೆ–2024 ಹಿನ್ನೆಲೆಯಲ್ಲಿ ಸಹಕಾರ ಸಂಘಗಳ/ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ಚುನಾವಣೆಗಳನ್ನು ಮುಂದೂಡುವ ಕುರಿತು.**

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ:ಸಿಒ 34 ಸಿಎಲ್ಎಂ 2024 (ಇ), ದಿನಾಂಕ : 13.03.2024.
2. ಸರ್ಕಾರದ ಆದೇಶ ಸಂಖ್ಯೆ:ಸಿಒ 34 ಸಿಎಲ್ಎಂ 2024 (ಇ), ದಿನಾಂಕ : 16.03.2024
3. ಕೇಂದ್ರ ಚುನಾವಣಾ ಆಯೋಗದ ಪ್ರಕಟಣೆ ಸಂಖ್ಯೆ : ECI/PN/23/2024, ದಿನಾಂಕ : 16–03–2024.
4. ಸಹಕಾರ ಚುನಾವಣಾ ಪ್ರಾಧಿಕಾರದ ಪತ್ರ ಸಂಖ್ಯೆ ಸಚುಪ್ರ/ಆಡಳಿತ/83/ಸ.ಸ&ಸೌ.ಸ.ಕಾ/2023–24, ದಿನಾಂಕ : 19.03.2024.

## ಪ್ರಸ್ತಾವನೆ

ಮೇಲೆ ಓದಲಾದ (1)ರ ಆದೇಶದಲ್ಲಿ, ಸಹಕಾರ ಸಂಘಗಳ ಆಡಳಿತ ಮಂಡಳಿ ಮುಕ್ತಾಯಗೊಳ್ಳಲಿರುವ ಸಹಕಾರ ಸಂಘಗಳ/ಬ್ಯಾಂಕುಗಳ ಚುನಾವಣೆಗಳನ್ನು ಮುಂದೂಡಿ ಹಾಗೂ ಸಹಕಾರಿ ಆಡಳಿತ ಮಂಡಳಿಯ ಹಾಗೂ ಪದಾಧಿಕಾರಿಗಳ ಅವಧಿಯನ್ನು ಮುಂದುವರೆಸಿ ಆದೇಶಿಸಲಾಗಿತ್ತು. ದಿನಾಂಕ : 13.03.2024 ರಂದು ನೀತಿ ಸಂಹಿತ ಜಾರಿಯಲ್ಲಿರದ ಕಾರಣ (1)ರಲ್ಲಿ ಓದಲಾದ ಆದೇಶವನ್ನು ಮೇಲೆ ಓದಲಾದ (2)ರ ಆದೇಶದಂತೆ ಹಿಂಪಡೆಯಲಾಗಿತ್ತು.

ಮೇಲೆ ಓದಲಾದ (3)ರ ಪ್ರಕಟಣೆಯಲ್ಲಿ ಕೇಂದ್ರ ಚುನಾವಣಾ ಆಯೋಗವು 2024ರ ಲೋಕಸಭಾ ಚುನಾವಣೆಗೆ ಅಧಿಸೂಚನೆ ಹೊರಡಿಸಿದ್ದು, ಚುನಾವಣಾ ನೀತಿ ಸಂಹಿತೆ ದಿನಾಂಕ : 16–03–2024 ರಿಂದ 06–06–2024ರವರೆಗೆ ಜಾರಿಗೊಳಿಸಿರುತ್ತದೆ.

ಮೇಲೆ ಓದಲಾದ (4)ರ ಸಹಕಾರ ಚುನಾವಣಾ ಪ್ರಾಧಿಕಾರದ ಪತ್ರದಲ್ಲಿ ಕೇಂದ್ರ ಚುನಾವಣಾ ಆಯೋಗವು ಅಧಿಸೂಚನೆ ಹೊರಡಿಸಿದ್ದು ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ. ರಾಜ್ಯದಲ್ಲಿನ ಫೆಡರಲ್, ಮಾಧ್ಯಮಿಕ ಹಾಗೂ ಪ್ರಾಥಮಿಕ ಸಹಕಾರ ಸಂಘ/ಬ್ಯಾಂಕುಗಳು, ಸೌಹಾರ್ದ ಸಹಕಾರಿಗಳನ್ನು ಒಳಗೊಂಡಂತೆ ಸುಮಾರು 1200 ಕ್ಕೂ ಹೆಚ್ಚು ಸಹಕಾರ ಸಂಸ್ಥೆಗಳ ಚುನಾವಣೆಯು ಮಾರ್ಚ್–2024 ರಿಂದ ಜೂನ್–2024 ಅವಧಿಯಲ್ಲಿ ನಡೆಸಬೇಕಾಗಿದ್ದು, ಸದರಿ ಚುನಾವಣೆಗಳನ್ನು ನಡೆಸಲು ಅಗತ್ಯ ಸಂಖ್ಯೆಯ ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ.

ಸಾರ್ವತ್ರಿಕ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಆಯಾಯ ವಿಭಾಗದ ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗಳು ಸಹಕಾರ ಇಲಾಖೆಯು ಸೇರಿದಂತೆ ಸರ್ಕಾರದ ಎಲ್ಲಾ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳು ಹಾಗೂ ಪೊಲೀಸ್ ಇಲಾಖೆಯು ಲೋಕಸಭಾ ಚುನಾವಣೆ ಕರ್ತವ್ಯಕ್ಕೆ ನಿಯೋಜನೆಯಾಗುವ ಹಿನ್ನೆಲೆಯಲ್ಲಿ ಸಹಕಾರ ಸಂಘಗಳ ಚುನಾವಣೆಗಳನ್ನು ಮುಕ್ತ ಹಾಗೂ ಪಾರದರ್ಶಕವಾಗಿ ನಡೆಸಲು ಕಷ್ಟ ಸಾಧ್ಯವಾಗುತ್ತದೆ ಎಂದು ಸಹಕಾರ ಚುನಾವಣಾ ಪ್ರಾಧಿಕಾರ ತಿಳಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಮಾರ್ಚ್ ಮಾಹೆ 2024 ರಿಂದ ದಿನಾಂಕ : 06–06–2024ರ ಈ ಅವಧಿಯಲ್ಲಿ ಆಡಳಿತ ಮಂಡಳಿಯ ಪದಾವಧಿ ಮುಕ್ತಾಯಗೊಳ್ಳುವ ಸಹಕಾರ ಸಂಘಗಳ ಆಡಳಿತ ಮಂಡಳಿಯ ಚುನಾವಣೆಗಳನ್ನು ಮುಂದೂಡುವ ಅವಶ್ಯಕತೆ ಇರುತ್ತದೆ. ಪದಾವಧಿ ಮುಕ್ತಾಯಗೊಳ್ಳಲಿರುವ ಸಹಕಾರ ಸಂಘಗಳ/ಬ್ಯಾಂಕುಗಳ ಆಡಳಿತ ಮಂಡಳಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಬೇಕಾಗುತ್ತದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ–1959 ಕಲಂ 121ರ ಅವಕಾಶದಂತೆ ರಾಜ್ಯ ಸರ್ಕಾರವು ಮಾರ್ಚ್–2024 ರಿಂದ 06–06–2024ರ ನಿರ್ದಿಷ್ಟ ಅವಧಿಯಲ್ಲಿ ಚುನಾವಣೆ ನಡೆಸಲು ಬಾಕಿ ಇರುವ ವರ್ಗಗಳ ಸುಮಾರು 1200 ಸಹಕಾರಿ ಸಂಸ್ಥೆಗಳಿಗೆ ಸಾರ್ವತ್ರಿಕ ಲೋಕಸಭಾ ಚುನಾವಣೆ–2024ರ ವಿಶೇಷ ಸಂದರ್ಭದಲ್ಲಿ ಈ ಸಂಸ್ಥೆಗಳ ಚುನಾವಣೆ ಮುಂದೂಡುವುದು ಅನಿವಾರ್ಯವಾಗಿರುತ್ತದೆ.

ಆದರೆ ಇಲಾಖಾ ಅಧಿಕಾರಿ/ಸಿಬ್ಬಂದಿಗಳು ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಳ್ಳಲಿರುವ ಹಿನ್ನೆಲೆಯಲ್ಲಿ ಆಡಳಿತಾಧಿಕಾರಿಗಳಾಗಿ ನೇಮಿಸಲು ಸಿಬ್ಬಂದಿ ಕೊರತೆಯಾಗುವ ಕಾರಣ ಇದೊಂದು ವಿಶೇಷ ಸನ್ನಿವೇಶ ಎಂದು ಪರಿಗಣಿಸಿ, ಮಾರ್ಚ್ ಮಾಹೆ 2024 ರಿಂದ

ದಿನಾಂಕ : 06–06–2024ರ ಅವಧಿಯಲ್ಲಿ ಆಡಳಿತ ಮಂಡಳಿಗಳ ಪದಾವಧಿಯು ಮುಕ್ತಾಯಗೊಳ್ಳಲಿರುವ ಸಹಕಾರ ಸಂಘಗಳ ಆಡಳಿತ ಮಂಡಳಿಯ ಚುನಾವಣೆಗಳನ್ನು ದಿನಾಂಕ : 06–06–2024ರವರೆಗೆ ಮುಂದೂಡಿ ಹಾಲಿ ಇರುವ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಅವಧಿಯನ್ನು ಮುಂದುವರಿಸುವುದು ಅವಶ್ಯವೆಂದು ಪರಿಗಣಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 34 ಸಿಎಲ್‌ಎಮ್ 2024 ಬೆಂಗಳೂರು, ದಿನಾಂಕ : 21–03–2024**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ–1959 ಕಲಂ 121ರ ಅವಕಾಶದಂತೆ ಸರ್ಕಾರಕ್ಕೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಆದೇಶಿಸಿದೆ.

1. ಮಾರ್ಚ್ ಮಾಹೆ 2024 ರಿಂದ ದಿನಾಂಕ : 06–06–2024ರ ಅವಧಿಯಲ್ಲಿ ಆಡಳಿತ ಮಂಡಳಿಗಳ ಪದಾವಧಿಯು ಮುಕ್ತಾಯಗೊಳ್ಳಲಿರುವ ಸಹಕಾರ ಸಂಘಗಳು/ಸಹಕಾರ ಬ್ಯಾಂಕುಗಳ (ಪ್ರಾಥಮಿಕ, ಮಾಧ್ಯಮಿಕ/ಒಕ್ಕೂಟ [ಫೆಡರಲ್ ಸಂಸ್ಥೆ] ಮತ್ತು ಅಪೆಕ್ಸ್ ಸಹಕಾರ ಸಂಘಗಳ) ಚುನಾವಣೆಗಳನ್ನು ಕರ್ನಾಟಕ ಸಹಕಾರ ಸಂಘಗಳ –1959ರ ಪ್ರಕರಣ 28 ಎ (4) (5), 28 (ಬಿ), 29 ಎಫ್ (4), 39 (ಎ)ಗಳಿಗೆ ವಿನಾಯಿತಿ ನೀಡಿ ಸಹಕಾರ ಸಂಘಗಳ ಆಡಳಿತ ಮಂಡಳಿಯ ಚುನಾವಣೆಗಳನ್ನು ದಿನಾಂಕ:06–06–2024ರ ವರೆಗೆ ಮುಂದೂಡಿ ಹಾಲಿ ಇರುವ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಅವಧಿಯನ್ನು ಮುಂದುವರಿಸಿದೆ. ಅಧಿಕಾರವಧಿ ಮುಂದುವರೆಸಿರುವ ಅವಧಿಯಲ್ಲಿ ಆಡಳಿತ ಮಂಡಳಿಗಳು ಯಾವುದೇ ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳತಕ್ಕದ್ದಲ್ಲ ಹಾಗೂ ಕಾರ್ಯಚಟುವಟಿಕೆಗಳಿಗೆ ಸೀಮಿತಗೊಳಿಸಿ ಕಾರ್ಯನಿರ್ವಹಿಸತಕ್ಕದ್ದು. ದೈನಂದಿನ ಕಾರ್ಯಚಟುವಟಿಕೆಗಳಿಗೆ ಸೀಮಿತಗೊಳಿಸಿ ಕಾರ್ಯನಿರ್ವಹಿಸತಕ್ಕದ್ದು.
2. ಈಗಾಗಲೇ ಆಡಳಿತ ಮಂಡಳಿ ಚುನಾವಣೆ ನಡೆದು ಪದಾಧಿಕಾರಿಗಳ ಚುನಾವಣೆ ಬಾಕಿ ಇದ್ದಲ್ಲಿ, ಅಂತಹ ಪ್ರಕರಣಗಳಿಗೆ ಈ ಆದೇಶ ಅನ್ವಯವಾಗತಕ್ಕದ್ದಲ್ಲ.
3. ಈಗಾಗಲೇ, ಚುನಾವಣೆ ವೇಳಾಪಟ್ಟಿ ಪ್ರಕಟಿಸಿದ್ದಲ್ಲಿ ಅಂತಹ ಸಹಕಾರ ಸಂಘಗಳ ಚುನಾವಣೆ ಪ್ರಕ್ರಿಯೆಯು ಯಥಾಸ್ಥಿತಿಯಲ್ಲಿ ನಿಂತು ಹೋಗತಕ್ಕದ್ದು ಮತ್ತು ದಿನಾಂಕ : 06–06–2024ರ ನಂತರ ನಿಂತು ಹೋದ ಹಂತದಿಂದಲೇ ಚುನಾವಣಾ ಪ್ರಕ್ರಿಯೆ ಮುಂದುವರಿಸತಕ್ಕದ್ದು.
4. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 28 ಎ (5), 30 (1) ಮತ್ತು ಪ್ರಕರಣ 31 ರಡಿಯಲ್ಲಿ ಸಂದರ್ಭಾನುಸಾರ ಆಡಳಿತಾಧಿಕಾರಿ ಮತ್ತು ವಿಶೇಷಾಧಿಕಾರಿ ನೇಮಿಸಿರುವ ಪ್ರಕರಣಗಳಲ್ಲಿ ಆಡಳಿತಾಧಿಕಾರಿ/ವಿಶೇಷಾಧಿಕಾರಿಗಳೇ ಮುಂದುವರೆಯತಕ್ಕದ್ದು.
5. ಈಗಾಗಲೇ ಘನ ನ್ಯಾಯಾಲಯಗಳ ಆದೇಶದಂತೆ ಚುನಾವಣಾ ಪ್ರಕ್ರಿಯೆ ಪ್ರಾರಂಭಗೊಂಡಿದ್ದಲ್ಲಿ/ಪ್ರಾರಂಭಗೊಳ್ಳಬೇಕಿದ್ದಲ್ಲಿ ಆದೇಶವನ್ನು ಘನ ನ್ಯಾಯಾಲಯದ ಗಮನಕ್ಕೆ ತಂದು ಘನ ನ್ಯಾಯಾಲಯದ ಆದೇಶದಂತೆ ಕ್ರಮವಿಡತಕ್ಕದ್ದು.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ**

**(ಎ.ಸಿ.ದಿವಾಕರ್)**

**ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,**

**ಸಹಕಾರ ಇಲಾಖೆ**

## ಅರ್ಥಶಾಸ್ತ್ರಜ್ಞ, ಶಿಕ್ಷಣ ತಜ್ಞ ಮತ್ತು ಸಂವಿಧಾನ ತಜ್ಞ ಅಂಬೇಡ್ಕರ್ ಮತ್ತು ಜಾಗತಿಕ ಚಿಂತನೆಗಳು

# ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ರವರ 133ನೇ ಜಯಂತಿ

ಭಾರತ ಮಾತ್ರವಲ್ಲದೇ ಜಗತ್ತಿನ ನೂರಾರು ರಾಷ್ಟ್ರಗಳು ಅಂಬೇಡ್ಕರ್ ರವರ ಜನ್ಮ ಜಯಂತಿಯನ್ನು ಆಚರಿಸುತ್ತಿವೆ ಎಂದರೆ ಅಂಬೇಡ್ಕರ್ ರವರ ವಿಶ್ವಮಟ್ಟದ ಸಾಧನೆಗೆ ಇಡೀ ಜಗತ್ತೇ ತಲೆ ಬಾಗಿದೆ. ಆ ಹಿನ್ನಲೆ ಅಂಬೇಡ್ಕರ್ ಜಯಂತಿಯನ್ನು ದೇಶ, ಭಾಷೆಯ ಗಡಿ ಮೀರಿ ಆಚರಿಸಲಾಗುತ್ತದೆ. ಪ್ರಜ್ಞೆ, ಅರಿವು, ಸಮಾನತೆ, ಜಾಗೃತಿ, ಸ್ಫೂರ್ತಿ, ಹಾಗೂ ಹೋರಾಟಕ್ಕೆ ಇನ್ನೊಂದು ಹೆಸರೆ ಡಾ. ಬಾಬಾ ಸಾಹೇಬ್ ಭೀಮರಾವ್ ಅಂಬೇಡ್ಕರ್.

ಡಾ ಬಿ.ಆರ್. ಅಂಬೇಡ್ಕರ್ ಧ್ವನಿ ಇಲ್ಲದ, ತುಳಿತಕ್ಕೊಳಗಾದ ದೇಶದ ಬಹುಸಂಖ್ಯಾತ ಮೂಲನಿವಾಸಿಗಳನ್ನು ದಾಸ್ಯದ ಸಂಕೋಲೆಯಿಂದ ಮುಕ್ತಿಗೊಳಿಸಿದ ಶತಮಾನದ ಮಹಾಪುರುಷ. ಬಿಸಿಲು, ಬೆವರು, ಬಡತನದಲ್ಲಿ ಅರಳಿದ ಪ್ರತಿಭೆಯೇ ಬಾಬಾಸಾಹೇಬ್ ಅಂಬೇಡ್ಕರ್. ಅತ್ಯಂತ ಕಡು ಬಡತನ ಮತ್ತು ಅಸ್ಪೃಶ್ಯತೆಯ ಬೆಂಕಿಯ ಕುಲುಮೆಯಲ್ಲಿ ಬೆಂದರೂ ಸಹ ಕಷ್ಟಗಳಿಗೆ ಬಾಗದೇ ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡಿ ಪ್ರಪಂಚದಲ್ಲಿ ಅತಿ ಹೆಚ್ಚು ಡಿಗ್ರಿಗಳನ್ನು ಪಡೆದಿರುವ ವಿಶ್ವದ ಮೊದಲ ವ್ಯಕ್ತಿ. ವಿದೇಶದಲ್ಲಿ ಪಿ.ಎಚ್.ಡಿ ಮುಗಿಸಿ ಡಾಕ್ಟರೇಟ್ ಪಡೆದ ಮೊದಲ ಭಾರತೀಯ. ಸಂವಿಧಾನವನ್ನು ರಚಿಸಿ ಕೋಟ್ಯಂತರ ಭಾರತೀಯರ ಹಣೆಬರಹವನ್ನೆ ಬದಲಾಯಿಸಿದ ಮಹಾ ಶಿಲ್ಪಿ ಅಂಬೇಡ್ಕರ್ ರವರ ಬದುಕು ಜಗತ್ತಿಗೆ ಸ್ಫೂರ್ತಿ ಆದರ್ಶ ಮತ್ತು ದೊಡ್ಡ ಸಂದೇಶ.

ಒಂದು ಕಾಲದಲ್ಲಿ ದಲಿತ ಎಂಬ ಕಾರಣಕ್ಕೆ ಅವರನ್ನು ಶಾಲೆಗೆ ಸೇರಿಸಿಕೊಳ್ಳಲು ಶಿಕ್ಷಕರು ನಿರಾಕರಿಸಿದ್ದರು. ಅಂಬೇಡ್ಕರ್‌ರವರಿಗೆ ಓದಲು ಗ್ರಂಥಾಲಯದಿಂದ ಪುಸ್ತಕ ಕೊಡುತ್ತಿರಲಿಲ್ಲ ಆದರೆ ಇಡೀ ದೇಶವೇ ಕೈ ಮುಗಿದು ನಮಸ್ಕರಿಸುವಂತಹ ಸಂವಿಧಾನ ಎಂಬ ಅದ್ಭುತ ಪುಸ್ತಕವನ್ನು ಬರೆದು ಎಲ್ಲರಿಗೂ ಸಮಾನ ಹಕ್ಕುಗಳನ್ನು ಕಲ್ಪಿಸಿದ ಮಹಾನಾಯಕ.

ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವ ಭಾವನೆ ಮೂಲಕ ಭಾರತದ ಪ್ರತಿಯೊಬ್ಬ ಪ್ರಜೆಗೂ ಸಮಾನ ಸ್ಥಾನಮಾನ ಕಲ್ಪಿಸಿಕೊಟ್ಟರು. ಇದಕ್ಕೆ ಮೂಲ ಕಾರಣ ಬಾಲ್ಯದಿಂದಲೂ ಬಡತನ ಅಸಮಾನತೆ ಅಪಮಾನಗಳಿಂದಲೇ ರೋಸಿಹೋಗಿದ್ದ ಅಂಬೇಡ್ಕರ್ ಅವರ ಅಂತರಂಗದಲ್ಲಿ ಅಗ್ನಿ ಪರ್ವತದ ಜ್ವಾಲೆ ಹತ್ತಿ ಉರಿಯುತ್ತಿತ್ತು.

ಮೇಲ್ಜಾತಿಯವರ ದಬ್ಬಾಳಿಕೆಯ ಪ್ರತೀಕವೆಂಬಂತೆ ಕೆಳಜಾತಿಯವರನ್ನು ಪಶುಗಳ ರೀತಿ ನೋಡಲಾಗುತ್ತಿದ್ದ ಆ ಕಾಲದಲ್ಲಿ ಮೊದಮೊದಲು ಭೀಮರಾವ್ (ಅಂಬೇಡ್ಕರ್ ರವರ ಬಾಲ್ಯದ ಹೆಸರು) ಅವರನ್ನು ಶಾಲೆಗೆ ಸೇರಿಸಿಕೊಳ್ಳಲು ನಿರಾಕರಿಸಿದ್ದರು. ಆಮೇಲೆ ಅವರ ತಂದೆಯ ಬಲವಂತಕ್ಕೆ ಮಣಿದು ಪ್ರವೇಶ ನೀಡಲಾಗಿದ್ದರಿಂದ ಶಾಲೆಯಲ್ಲಿ ಅಂಬೇಡ್ಕರ್ ಅವರನ್ನು ಯಾವುದೋ ಒಂದು ಮೂಲೆಯಲ್ಲಿ ಕೂರಿಸಲಾಗುತ್ತಿತ್ತು. ಅವರನ್ನು ಯಾರು ಮುಟ್ಟುತ್ತಿರಲಿಲ್ಲ, ಮಾತನಾಡಿಸುತ್ತಿರಲಿಲ್ಲ. ಒಮ್ಮೆ ಶಾಲೆಯಿಂದ ಮನೆಗೆ ಹೋಗುವಾಗ ಬಾಯಾರಿಕೆಯಾಗಿದ್ದರಿಂದ ಅಂಬೇಡ್ಕರ್ ಬಾವಿಯಲ್ಲಿ ನೀರು



ಕುಡಿಯುತ್ತಾರೆ. ಅದನ್ನು ನೋಡಿದ ಬ್ರಾಹ್ಮಣ ವ್ಯಕ್ತಿಯೊಬ್ಬ ಮನಸೋ ಇಚ್ಛೆ ಥಳಿಸುತ್ತಾನೆ. ಈ ಘಟನೆ ಅಂಬೇಡ್ಕರ್ ರವರ ಮನಸ್ಸಿನ ಮೇಲೆ ತೀವ್ರ ಆಘಾತವನ್ನುಂಟು ಮಾಡಿತ್ತು.

ಮುಂದೆ ಅವರ ಜೀವನದ ಮೊದಲ ಹೋರಾಟವಾದ ಮಹಾದ್ ಸತ್ಯಾಗ್ರಹ ದೊಡ್ಡ ಇತಿಹಾಸ ಬರೆದಿತ್ತು. 20–3–1927ರಂದು ಮಹಾರಾಷ್ಟ್ರದ ಕೋಲ್ಬ ಜಿಲ್ಲೆಯ ಮಹದ್ ನಗರದಲ್ಲಿರುವ ಚೌಡರ್ ಕೆರೆಗೆ ತನ್ನ ಸಾವಿರಾರು ಅನುಯಾಯಿಗಳನ್ನು ಕರೆದೊಯ್ದು ನೀರನ್ನು ಮುಟ್ಟಿ ಬೊಗಸೆಯಲ್ಲಿ ತನ್ನ ಅನುಯಾಯಿಗಳೊಂದಿಗೆ ನೀರು ಕುಡಿದು ದಲಿತರು ಸಾರ್ವಜನಿಕ ಸ್ಥಳಗಳಲ್ಲಿ ನೀರು ಕುಡಿಯುವ ಹಕ್ಕನ್ನು ಪ್ರಪ್ರಥಮವಾಗಿ ಪ್ರತಿಪಾದಿಸಿದರು. ಭಾರತ ಸರ್ಕಾರ ಹೊರ ತಂದಿರುವ ನೂರು ರೂಪಾಯಿ ಮೌಲ್ಯದ ಅಂಚೆ ಚೀಟಿಯಲ್ಲಿ ಅಂಬೇಡ್ಕರ್ ರವರ ಹೋರಾಟದ ಈ ಚಿತ್ರವನ್ನು ಕಾಣಬಹುದು.

ಅಸ್ಪೃಶ್ಯರಿಗೆ ದೇವಸ್ಥಾನದ ಒಳಗೆ ಪ್ರವೇಶವಿಲ್ಲ ಎಂಬ ಮೇಲ್ಜಾತಿಯವರ ನಡೆಯನ್ನು ಧಿಕ್ಕರಿಸಿ ದೇವರ ಸೃಷ್ಟಿಯಲ್ಲಿ ಎಲ್ಲರೂ ಸಮಾನರು. ಕುಡಿಯುವ ನೀರು ಒಂದೇ, ಉಸಿರಾಡುವ ಗಾಳಿ ಒಂದೇ, ಸುಡುವ ಬೆಂಕಿ ಒಂದೇ ಪ್ರಕೃತಿಯಲ್ಲಿ ಇಲ್ಲದ ಮೇಲು ಕೀಳು ನಿಮ್ಮ ಗುಡಿಯಲ್ಲೇಕೆ...? ಎಂದು ಪ್ರಶ್ನಿಸಿದ ಅಂಬೇಡ್ಕರ್ ತಮ್ಮ ಬೆಂಬಲಿಗರೊಂದಿಗೆ 1930ರ ಮಾರ್ಚ್ 3 ರಂದು ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಕಾಳರಾಮ ದೇವಸ್ಥಾನ ಪ್ರವೇಶಿಸಲು ಮುಂದಾದಾಗ ಪುರೋಹಿತ ವರ್ಗದ ಕಿಡಿಗೇಡಿಗಳು ಕಲ್ಲು ತೂರಾಟ ಮಾಡಿ ಅಂಬೇಡ್ಕರ್ ರವರ ಕೊಲೆಯತ್ನ ಮಾಡುತ್ತಾರೆ. ಆಗ ಬೆಂಬಲಿಗರು ಕೊಡೆಯ ಆಕಾರದಲ್ಲಿ ಸುತ್ತುವರಿದು ಬಾಬಾ ಸಾಹೇಬರ ಜೀವ ರಕ್ಷಣೆ ಮಾಡಿ ಅವರೆಲ್ಲರು ಮಾರಣಾಂತಿಕ ಹಲ್ಲೆಗೆ ಒಳಗಾಗುತ್ತಾರೆ.

### ಬಿ.ಆರ್. ಅಂಬೇಡ್ಕರ್ ತತ್ವಗಳು

- ನಾನು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಕಲಿಸುವ ಧರ್ಮವನ್ನು ನಂಬುತ್ತೇನೆ.
- ಸಂವಿಧಾನವನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ ಎಂದು ನನಗೆ ಅನಿಸಿದರೆ ಅದನ್ನು ಸುಡುವವರಲ್ಲಿ ನಾನೇ ಮೊದಲು.
- ಸಮಾನತೆ ಒಂದು ಕಲ್ಪನೆ ಆಗಿರಬಹುದು, ಆದರೆ ಅದನ್ನು ಆಡಳಿತದ ತತ್ವವಾಗಿ ಒಪ್ಪಿಕೊಳ್ಳಬೇಕು ಮತ್ತು ಅದನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.
- ತನ್ನ ಮರಣವನ್ನು ಯಾವಾಗಲೂ ನೆನಪಿಸಿಕೊಳ್ಳುವ ವ್ಯಕ್ತಿ, ಅವನು ಯಾವಾಗಲೂ ಒಳ್ಳೆಯ ಕೆಲಸದಲ್ಲಿ ತೊಡಗಿರುತ್ತಾನೆ.
- ವಿದ್ಯಾವಂತರಾಗಿ, ಸಂಘಟಿತರಾಗಿರಿ. ಹಕ್ಕುಗಳಿಗಾಗಿ ನಿರಂತರ ಹೋರಾಟ ನಡೆಸಿ.
- ಶಿಕ್ಷಣ ಎನ್ನುವಂತಹದ್ದು ಪುರುಷರಿಗೆ ಎಷ್ಟು ಮುಖ್ಯವೋ, ಮಹಿಳೆಯರಿಗೂ ಅಷ್ಟೇ ಮುಖ್ಯ.
- ಜ್ಞಾನವು ಪ್ರತಿಯೊಬ್ಬ ವ್ಯಕ್ತಿಯ ಜೀವನಕ್ಕೆ ಆಧಾರವಾಗಿದೆ.
- ದೊಡ್ಡ ಪ್ರಯತ್ನಗಳನ್ನು ಹೊರತುಪಡಿಸಿ ಈ ಜಗತ್ತಿನಲ್ಲಿ ಯಾವುದೂ ಮೌಲ್ಯಯುತವಾಗಿಲ್ಲ.
- ನೀವು ಮನಸ್ಸಿನಿಂದ ಮುಕ್ತರಾಗಿದ್ದರೆ ನೀವು ನಿಜವಾಗಿಯೂ ಸ್ವತಂತ್ರರು.
- ನೀವು ರುಚಿಯನ್ನು ಬದಲಾಯಿಸಬಹುದು ಆದರೆ ವಿಷವನ್ನು ಅಮೃತವನ್ನಾಗಿ ಪರಿವರ್ತಿಸಲು ಎಂದಿಗೂ ಸಾಧ್ಯವಿಲ್ಲ.
- ದೇಶವನ್ನು ಅಭಿವೃದ್ಧಿ ಮಾಡುವ ಮೊದಲು ನಾವು ನಮ್ಮ ಬುದ್ಧಿಯನ್ನು ಬೆಳವಣಿಗೆ ಮಾಡಿಕೊಳ್ಳುವುದು ಅವಶ್ಯಕ.

1927ರಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಮುಂಬಯಿಯ ಶಾಸಕಾಂಗದ ಸದಸ್ಯರಾಗಿ ಬ್ರಿಟಿಷ್ ಸರ್ಕಾರ ನೇಮಿಸುತ್ತದೆ. 1930 ರಿಂದ 1932 ವರೆಗೆ ಲಂಡನ್ನಿನಲ್ಲಿ ನಡೆಯುವ ದುಂಡು ಮೇಜಿನ ಸಮ್ಮೇಳನದಲ್ಲಿ ದಲಿತರ ಪ್ರತಿನಿಧಿಯಾಗಿ ಭಾಗವಹಿಸಿ ದಲಿತರಿಗೆ ಪ್ರತ್ಯೇಕ ಮತದಾನದ ಹಕ್ಕು ಕಲ್ಪಿಸಿಕೊಟ್ಟು ಬಹುದಿನಗಳಿಂದ ಅಧಿಕಾರದಿಂದ ದೂರವಿದ್ದ ದಲಿತರಿಗೆ ಆಳ್ವಿಕೆ ಮಾಡುವ ಅಧಿಕಾರವನ್ನು ದೊರಕಿಸಿಕೊಡುತ್ತಾರೆ.

ಆದ್ರೆ ಗಾಂಧೀಜಿ ದಲಿತರಿಗೆ ಪ್ರತ್ಯೇಕ ಮತದಾನ ಬೇಡ ಹಿಂದೂ ಧರ್ಮ ಒಡೆದು ಹೋಗುತ್ತದೆಂದು ಪುಣೆಯ ಯರವಾಡ ಜೈಲಿನಲ್ಲಿ ಅಮರಣಾಂತರ ಉಪವಾಸ ಸತ್ಯಾಗ್ರಹ ನಡೆಸುತ್ತಾರೆ. ಅಂತಿಮವಾಗಿ ಗಾಂಧಿ ಮತ್ತು ಅಂಬೇಡ್ಕರ್ ರವರ ನಡುವೆ ಸಂಧಾನ ನಡೆದು ಪ್ರತ್ಯೇಕ ಮತ ಕ್ಷೇತ್ರದ 71 ಸ್ಥಾನಗಳ ಬದಲಾಗಿ 148 ಸ್ಥಾನಗಳ ಹಳೆಯ ಜಂಟಿ ಮತದಾನ ಪದ್ಧತಿಯಂತೆ ದಲಿತರಿಗೆ ಮೀಸಲಾತಿ ನೀಡಲಾಯಿತು.

ನೆಲದ ಮೂಲನಿವಾಸಿ ಅಸ್ಪೃಶ್ಯರಿಗೆ ಅಧಿಕಾರ ಕೊಡಿಸುವ ಉದ್ದೇಶದಿಂದ 1936ರಲ್ಲಿ ಇಂಡಿಪೆಂಡೆಂಟ್ ಲೇಬರ್ ಪಾರ್ಟಿ ಸ್ಥಾಪಿಸಿ, ಪ್ರಾಂತೀಯ ಶಾಸಕಾಂಗದಲ್ಲಿ ನಡೆದ ಚುನಾವಣೆಯಲ್ಲಿ 17 ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಹಾಕುತ್ತಾರೆ. ಅದರಲ್ಲಿ 15 ಅಭ್ಯರ್ಥಿಗಳು ಗೆಲ್ಲುತ್ತಾರೆ. ದಲಿತರಿಗೆ ಶಿಕ್ಷಣದ ಅವಶ್ಯಕತೆ ಗಮನಿಸಿ 1946ರಲ್ಲಿ ಪಿಪಲ್ಸ್ ಎಜುಕೇಶನ್ ಇನ್ಸಿಟ್ಯೂಶನ್ ಸ್ಥಾಪಿಸಿದರು.

1946ರಲ್ಲಿ ಸಂವಿಧಾನ ರಚನಾ ಸಭೆಗೆ ಬಂಗಾಳ ಪ್ರಾಂತದಿಂದ ಆಯ್ಕೆಯಾಗಿ ಮುಂದೆ 1947ರಲ್ಲಿ ಕರಡು ಸಮಿತಿ ಅಧ್ಯಕ್ಷರಾಗಿ ನೇಮಕ ಹೊಂದಿ, ಸತತವಾಗಿ ಮೂರು ವರ್ಷಗಳವರೆಗೆ ಹಗಲು ರಾತ್ರಿ ಸಂವಿಧಾನ ರಚನೆಯಲ್ಲಿ ತೊಡಗಿಸಿಕೊಂಡು 1950ರಲ್ಲಿ ಭಾರತದ ಸಂವಿಧಾನ ಸಿದ್ದವಾಗುತ್ತದೆ. ಅದಕ್ಕಾಗಿ ಇವರನ್ನು ಸಂವಿಧಾನದ ಶಿಲ್ಪಿ ಎಂದು ಪರಿಗಣಿಸಲಾಗಿದೆ. 1947 ರಲ್ಲಿ ಕಾನೂನು ಮಂತ್ರಿಯಾದ ಡಾ ಬಿ.ಆರ್. ಅಂಬೇಡ್ಕರ್ ಅವರು ಪ್ರಧಾನ ಮಂತ್ರಿ ಪಂಡಿತ್ ಜವಾಹರಲಾಲ್ ನೆಹರೂ ಅವರಿಗೆ ಆತ್ಮೀಯರಾಗಿರುತ್ತಾರೆ. ನೆಹರೂ ಕಲ್ಪಿಸಿದ ಸಮಾಜವಾದಿ ಪ್ರಜಾಸತ್ತಾತ್ಮಕ ರಾಜ್ಯವ್ಯವಸ್ಥೆ ಡಾ ಅಂಬೇಡ್ಕರ್ ರವರಿಂದಲೇ ಪ್ರಭಾವಿತವಾಗಿತು. ಪಂಚ ವಾರ್ಷಿಕ ಯೋಜನೆಗೆ ಅಂಬೇಡ್ಕರರವರು ಮಾರ್ಗದರ್ಶಿಗಳಗಿದ್ದರು ಮತ್ತು ಭಾಕ್ರನಂಗಲ್ ಅಣೆಕಟ್ಟು ಕಟ್ಟಲು ಸಲಹೆ ನೀಡಿದರು. ಅಂಬೇಡ್ಕರವರು ಭಾರತದ ನೀರಾವರಿ ಯೋಜನೆಯ ಜನಕರಾಗಿದ್ದು. ಉತ್ತರ ಭಾರತ ಮತ್ತು ದಕ್ಷಿಣ ಭಾರತ ನದಿಗಳ ಜೋಡಣೆಗೆ 1952ರಲ್ಲಿ ಸಲಹೆ ನೀಡಿದರು. ನೆಹರೂರವರು ವಿದೇಶಿ ಗಣ್ಯರಿಗೆ ಡಾ ಅಂಬೇಡ್ಕರ್ ನನ್ನ ಮಂತ್ರಿ ಮಂಡಲದ ವಜ್ರವಾಗಿದ್ದಾರೆ ಎಂದು ಪರಿಚಯಿಸುತ್ತಿದ್ದರು. ಡಾ. ಅಂಬೇಡ್ಕರ್ ಹೇಳಿದ ಈ ವಿಚಾರಗಳನ್ನು ನಾವು ನಮ್ಮ ಗಮನದಲ್ಲಿಟ್ಟುಕೊಂಡು ಅದರಂತೆ ನಡೆದುಕೊಳ್ಳುವುದರಿಂದ ಜೀವನದಲ್ಲಿ ಸಕಾರಾತ್ಮಕ ಭಾವನೆಗಳನ್ನು ಅನುಭವಿಸಬಹುದು.

ಹುಟ್ಟಿನಿಂದಲು ಅಗ್ನಿ ಪರೀಕ್ಷೆಗಳನ್ನೆ ಎದುರಿಸುತ್ತಿದ್ದ ಅಂಬೇಡ್ಕರ್ ರವರ ಬದುಕೇ ಸಮುದ್ರದ ಅಲೆಗಳ ವಿರುದ್ಧ ಈಜುವಷ್ಟು ನಿರಂತರ ಹೋರಾಟ. ಆದರೂ ಎದೆ ಗುಂದಲಿಲ್ಲ ದೃತಿಗೆಡಲಿಲ್ಲ ಸೋಲೊಪ್ಪಲಿಲ್ಲ. ಕಾರಣ ಅವರು ನಂಬಿದ್ದ ಒಂದು ಸಿದ್ದಾಂತ ಎಲ್ಲ ನೋವುಗಳನ್ನು ಮರೆಸಿ ಅವರನ್ನು ಗಟ್ಟಿಗೊಳಿಸಿತ್ತು. ನಮ್ಮ ಜೀವನ ಸಾರ್ಥಕವಾಗುವುದು ನಾವೆಷ್ಟು ಸುಖ ಸಂತೋಷದಿಂದ ಇದ್ದೇವೆ ಎಂಬುವುದರಿಂದಲ್ಲ.

ನಮ್ಮಿಂದಾಗಿ ಎಷ್ಟು ಜನ ಸುಖ ಶಾಂತಿ ಸಂತಸದಿಂದಿದ್ದಾರೆ ಎಂಬ ಸತ್ಯದಿಂದ. ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಅದು ತಿಳಿದಿತ್ತು. ಇದೇ ಉದ್ದೇಶದಿಂದ ಸರ್ವರಿಗೂ ಸಮಪಾಲು ಸಮಬಾಳು ಸಮಾನತೆ ಸ್ವಾತಂತ್ರ್ಯ ಅಡಿಯಲ್ಲೇ ಜಗತ್ತಿನ ಅತಿದೊಡ್ಡ ಲಿಖಿತ ಸಂವಿಧಾನ ರಚಿಸಿ 1950ರ ಜನವರಿ 26ರಂದು ಭಾರತದಲ್ಲಿ ಜಾರಿಗೊಳಿಸಿದ ಡಾ. ಬಿ.ಆರ್. ಅಂಬೇಡ್ಕರ್ ಅವರ 133ನೇ ಜಯಂತಿಯ ಪ್ರಯುಕ್ತ ಅವರಿಗೆ ಒಂದು ದೊಡ್ಡ ಸಲಾಂ ಹೇಳೋಣ. ಜೊತೆಗೆ ಅಂಬೇಡ್ಕರ್ ಅವರ ಆದರ್ಶದಂತೆ ದೇಶದ ಶಾಂತಿ, ಸೌಹಾರ್ದತೆ ಹಾಗೂ ಏಕತೆಗೆ ಮಾರಾಕವಾದ ಕೋಮುವಾದ, ಜಾತಿವಾದ ಮೆಟ್ಟಿ ನಿಂತು ಜಾತ್ಯಾತೀತ ಭಾರತ ನಿರ್ಮಾಣಕ್ಕೆ ಶ್ರಮಿಸೋಣ. ದೇಶದ ಸಂವಿಧಾನ ರಕ್ಷಣೆಗಾಗಿ ನಿರಂತ ಹೋರಾಟ ನಡೆಸೋಣ.

**– ಮಂಜುನಾಥ ನಾಯ್ಕ, ಪತ್ರಕರ್ತರು, ಬೆಂಗಳೂರು**

# ಪ್ರಕೃತಿಯೊಂದಿಗೆ ಯುಗಾದಿ ಆಚರಿಸೋಣ

**ಯುಗಾದಿ ಹಬ್ಬದಲ್ಲಿ ಎಣ್ಣೆ ಸ್ನಾನ ಮತ್ತೊಂದು ವಿಶೇಷ, ಮನೆ ಮಂದಿಯೆಲ್ಲ ಸ್ನಾನ ಮಾಡಿದ ನಂತರ ಮತ್ತು ಏನನ್ನಾದರೂ ತಿನ್ನುವ ಮೊದಲು, ಕರಗಿದ ತುಪ್ಪ ತುಂಬಿದ ಬಟ್ಟಲಿನಲ್ಲಿ ಒಬ್ಬರು ಮತ್ತೊಬ್ಬರ ಪ್ರತಿಬಿಂಬವನ್ನು ನೋಡುವುದು ಶುಭವೆಂದು ಪರಿಗಣಿಸಲಾಗುತ್ತದೆ. ಮನೆಯ ಹಿರಿಯ ಮಹಿಳೆಯರು, ನಂತರ ಕುಟುಂಬದ ಎಲ್ಲ ಸದಸ್ಯರ ಹಣೆಯ ಮೇಲೆ 'ಕುಂಕುಮ' ಹಚ್ಚಿ. ಭಗವಂತನ ವಿಗ್ರಹಕ್ಕೆ ತಾಜಾ ಬಟ್ಟೆ ಮತ್ತು ಬಿಳಿ ಮಲ್ಲಿಗೆ ಹೂಗಳಿಂದ ಮಾಡಿದ ಹಾರವನ್ನು ಅಲಂಕರಿಸಿ, ಇಡೀ ಕುಟುಂಬವು ಒಟ್ಟಾಗಿ ಪ್ರಾರ್ಥನೆ ಸಲ್ಲಿಸುತ್ತಾರೆ.**

ರಾಜ್ಯದಲ್ಲಿ ಮಳೆ ಕೈಕೊಟ್ಟು ಭೀಕರ ಬರ ಎದುರಾಗಿದೆ. ಜಲಾಶಯಗಳು, ಕೆರೆ, ಕುಂಟೆ, ಬಾವಿಗಳು ಬತ್ತಿಹೋಗಿವೆ. ಹನಿ ಹನಿ ನೀರಿಗೂ ತತ್ವಾರ ಎದುರಾಗಿದೆ. ಮೊದಲಿನಿಂದಲೂ ಮನುಷ್ಯ ಮತ್ತು ಪ್ರಕೃತಿಗೆ ಅವಿನಾಭಾವ ಸಂಬಂಧ ಪ್ರಕೃತಿ ಮುನಿಸಿಕೊಂಡರೆ ಮನುಷ್ಯನಿಗೆ ಉಳಿಗಾವಿಲ್ಲ. ಪ್ರಕೃತಿಮಾತೆಯೊಂದಿಗೆ ಸುಮಧುರ ಸಂಬಂಧ ವಿಟ್ಟುಕೊಂಡರೆ ಅದು ನಮ್ಮನ್ನು ಪೋಷಿಸಿ ಮುನ್ನೇಡೆಸುತ್ತದೆ. ಪ್ರಕೃತಿಯ ಮೇಲೆ ದೌರ್ಜನ್ಯವೆಸಹಿದರೆ ಅದು ಮಾನವ ಕುಲದ ವಿನಾಶಕ್ಕೆ ನಾಂದಿಯಾಗುತ್ತದೆ.

ಪ್ರಕೃತಿಮಾತೆಯನ್ನು ಪೂಜಿಸುವ ಹಬ್ಬವೆ ಯುಗಾದಿ ನಮ್ಮ ಹಿರಿಯರು ಸಾವಿರಾರು ವರ್ಷಗಳಿಂದ ಪ್ರಕೃತಿಮಾತೆಯನ್ನು ಪೂಜಿಸಿ ಕೊಂಡೆ ಬಂದಿದ್ದಾರೆ.

ವಸಂತಋತು ಎಂದರೆ ಪ್ರಕೃತಿಯು ಹಸಿರಿನಿಂದ ಸಜ್ಜಾಗುವ ಸುಂದರಸಮಯ. ಈ ಋತುವಿನ ಚೈತ್ರಮಾಸದ ಮೊದಲ ದಿನವೇ ಯುಗಾದಿ. ಚಿಗುರೊಂದು ಮುಂದೆ ಹಣ್ಣಾಗಿ ಪೂರ್ಣತೆಯನ್ನು ಪಡೆಯಲು ಸಾಧ್ಯವಾಗಿಸುವಂಥ ಆರಂಭದ ಕ್ಷಣವಿದು. ಉದುರುವಿಕೆ; ಅರಳುವಿಕೆ; ಅಗಲುವಿಕೆ; ಚಿಗುರುವಿಕೆ – ಇವು ಸಮಗ್ರವೂ ಪರಿಪೂರ್ಣವೂ ಆದ ಕಾರ್ಯಚಕ್ರದ ಬೇರೆ ಬೇರೆ ಗತಿಗಳಷ್ಟೆ. ಇಂಥ ಸಂದೇಶವನ್ನು ನಮಗೆ ಪ್ರಕೃತಿ ನೀಡುತ್ತಿದೆ.

ಸುಖ–ದುಃಖಗಳನ್ನು ಹೀಗೆ ನಾವು ಸ್ವೀಕರಿಸಿದ್ದೇವೆ ಎಂಬುದರ ಸಾಂಕೇತಿಕತೆಯನ್ನು ಬೇವು – ಬೆಲ್ಲಗಳ ಮಿಶ್ರಣವನ್ನು ತಿನ್ನುವುದರಲ್ಲಿ ಕಾಣಬಹುದಾಗಿದೆ. ಯುಗದ ಆದಿಯಲ್ಲಿಯೇ ಬದುಕನ್ನು ಧೈರ್ಯವಾಗಿಯೂ ಸಂತಸ ವಾಗಿಯೂ ಸ್ವೀಕರಿಸುವಂಥ ವಿವೇಕವೇ ಯುಗಾದಿಹಬ್ಬದ ಮೂಲತತ್ವ.

ಯುಗಾದಿ ಹಬ್ಬ ಇದು ಹಿಂದೂಗಳ ಹೊಸ ವರ್ಷ ಆಚರಣೆಯೊಂದಿಗೆ ನಡೆಯುವ ಮೊದಲ ಹಬ್ಬ.

ಮಾನವ ಕುಲಕೋಟಿ ಹಾಗೂ ಸಕಲ ಚರಾ ಚರಾ ಜೀವ ಜಂತುಗಳ ಬೆಳವಣಿಗೆಗೆ ಸಕಲ ಸೌಲಭ್ಯಗಳನ್ನು ಕಲ್ಪಿಸಿದ ಪ್ರಕೃತಿ ಮಾತೆಯನ್ನು ಸ್ಮರಿಸಿ ಪೂಜಿಸುವುದೆ ಯುಗಾದಿಹಬ್ಬದ ವಿಶೇಷ.

ಪ್ರಕೃತಿ ಮಾತೆ ನಮಗೆ ಗಾಳಿ, ಬೆಳಕು, ನೀರು, ಭೂಮಿ, ಆಹಾರ ಸಹಿತ ಸರ್ವಸ್ವವನ್ನೂ ನೀಡಿದೆ ಆ ಮಾತೆಯನ್ನು ನಾವು ಎಷ್ಟು ಸ್ಮರಿಸಿದರು



ಕಮ್ಮಿಯೇ ನಮ್ಮನ್ನು ಜತನದಿಂದ ಕಾಪಾಡುವ ಪ್ರಕೃತಿಮಾತೆಯನ್ನು ಮುಂದಿನ ಪೀಳಿಗೆಗಾದರೂ ಕಾಪಾಡುವುದು ನಮ್ಮ ಆದ್ಯ ಕರ್ತವ್ಯ. ಈ ಸಂದೇಶವನ್ನು ಸಾರುವುದೆ ಯುಗಾದಿ ಹಬ್ಬದ ವಿಶೇಷಗಳಲ್ಲಿ ಒಂದಾಗಿದೆ.

ಇಂದಿನ ಆಧುನಿಕ ಯುಗದಲ್ಲಿ ಗಾಳಿ, ನೀರು, ಪರಿಸರ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಮಾಲಿನ್ಯ ಹೊಂದುತ್ತಿದ್ದು, ಅಭಿವೃದ್ಧಿಯ ಹೆಸರಿನಲ್ಲಿ ಕಾಡುಗಳನ್ನು ಎಗ್ಗಿಲ್ಲದೆ ನಾಶ ಮಾಡಲಾಗುತ್ತದೆ ಭವಿಷ್ಯದಲ್ಲಿ ಇದರ ದುಷ್ಪರಿಣಾಮ ಮಾನವ ಜನಾಂಗವೆ ಎದುರಿಸಬೇಕಾಗುತ್ತದೆ. ಆ ಹಿನ್ನಲೆಯಲ್ಲಿ ಪ್ರಕೃತಿ ಮಾತೆಯನ್ನು ಪೂಜಿಸುವ ಯುಗಾದಿ ಹಬ್ಬದಂದು ಪರಿಸರ ರಕ್ಷಣೆಯ ಸಂದೇಶಗಳನ್ನು ಸಾರುವ ಕೆಲಸ ಪ್ರತಿ ಮನೆಯಿಂದ ನಡೆದರೆ ಈ ಹಬ್ಬ ಇನ್ನಷ್ಟು ಅರ್ಥಪೂರ್ಣವಾಗುತ್ತದೆ.

ಹಬ್ಬದ ಸಿದ್ಧತೆಗಳು ಒಂದು ವಾರದ ಮೊದಲೇ ಪ್ರಾರಂಭವಾಗುತ್ತವೆ. ಮನೆಯ ಸಂಪೂರ್ಣವಾಗಿ ಶುಚಿಗೊಳಿಸಲಾಗುತ್ತದೆ. ಕುಟುಂಬದ ಪ್ರತಿಯೊಬ್ಬರಿಗೂ ಹೊಸ ಬಟ್ಟೆಗಳನ್ನು ಖರೀದಿಸಲಾಗುತ್ತದೆ. ಹಬ್ಬದ ದಿನದಂದು ಮನೆಯ ಹೆಂಗಸರು ಮನೆಯ ಬಾಗಿಲಲ್ಲಿ ವರ್ಣಮಯ 'ರಂಗೋಲಿ' ಹಾಕುತ್ತಾರೆ. ಹೊಸ ವರ್ಷವನ್ನು ಸ್ವಾಗತಿಸಲು ತಾಜಾ ಮಾವಿನ ಹಾಗೂ ಬೇವಿನ ಎಲೆಗಳಿಂದ ಮಾಡಿದ ತೋರಣ ಬಾಗಿಲಿಗೆ ಕಟ್ಟಲಾಗುತ್ತದೆ.

**ಯುಗಾದಿಯಂದು ಎಣ್ಣೆ ಸ್ನಾನ :** ಯುಗಾದಿ ಹಬ್ಬದಲ್ಲಿ ಎಣ್ಣೆ ಸ್ನಾನ ಮತ್ತೊಂದು ವಿಶೇಷ, ಮನೆ ಮಂದಿಯೆಲ್ಲ ಸ್ನಾನ ಮಾಡಿದ ನಂತರ ಮತ್ತು ಏನನ್ನಾದರೂ ತಿನ್ನುವ ಮೊದಲು, ಕರಗಿದ ತುಪ್ಪ ತುಂಬಿದ

ಬಟ್ಟಲಿನಲ್ಲಿ ಒಬ್ಬರು ಮತ್ತೊಬ್ಬರ ಪ್ರತಿಬಿಂಬವನ್ನು ನೋಡುವುದು ಶುಭವೆಂದು ಪರಿಗಣಿಸಲಾಗುತ್ತದೆ. ಮನೆಯ ಹಿರಿಯ ಮಹಿಳೆಯರು, ನಂತರ ಕುಟುಂಬದ ಎಲ್ಲ ಸದಸ್ಯರ ಹಣೆಯ ಮೇಲೆ 'ಕುಂಕುಮ' ಹಚ್ಚಿ. ಭಗವಂತನ ವಿಗ್ರಹಕ್ಕೆ ತಾಜಾ ಬಟ್ಟೆ ಮತ್ತು ಬಿಳಿ ಮಲ್ಲಿಗೆ ಹೂಗಳಿಂದ ಮಾಡಿದ ಹಾರವನ್ನು ಅಲಂಕರಿಸಿ, ಇಡೀ ಕುಟುಂಬವು ಒಟ್ಟಾಗಿ ಪ್ರಾರ್ಥನೆ ಸಲ್ಲಿಸುತ್ತಾರೆ.

**ಪಂಚಾಂಗ ಶ್ರವಣ :** ಪ್ರಾರ್ಥನೆ ಮುಗಿದ ನಂತರ ಪಂಚಾಂಗ ಪೂಜೆ ಓದುವುದು ವಾಡಿಕೆ. ಪಂಚಾಂಗ ಪೂಜೆಯ ನಂತರ ಮನೆಯ ಹಿರಿಯರು ಮನೆಯ ಪ್ರತಿಯೊಬ್ಬರೂ ಕೇಳುವಂತೆ ಪಂಚಾಂಗ ಓದುತ್ತಾರೆ. ಈ ಶುಭ ದಿನದಂದು ವಿಶೇಷ ಸಾಂಪ್ರದಾಯಿಕ ಭಕ್ಷ್ಯಗಳನ್ನು ಭಗವಂತನಿಗೆ ನೈವೇದ್ಯಕ್ಕಾಗಿ ತಯಾರಿಸಲಾಗುತ್ತದೆ. ಪುಳಿಯೋಗರೆ, ಒಬ್ಬಟ್ಟು, ಸಿಹಿ ಪೊಂಗಲ್, ಮಾವು ಪಚಡಿ, ಹೆಸರುಕಾಳು ಪಾಯಸ ಕೋಸಂಬರಿ, ವಡಾ ಇತ್ಯಾದಿ ತಿಂಡಿಗಳನ್ನ ಮಾಡಲಾಗುತ್ತದೆ. ಹೀಗೆ ಹಬ್ಬಕ್ಕೆಂದು ಮಾಡಿದ ಅಡುಗೆಯನ್ನ ಮೊದಲು ಭಗವಂತನಿಗೆ ನೈವೇದ್ಯ ಮಾಡಿ, ನಂತರ ಎಲ್ಲರಿಗೂ 'ಪ್ರಸಾದ' ವಿತರಿಸಲಾಗುತ್ತದೆ. ಹಬ್ಬದ ದಿನ ಸಂಜೆ ಭಗವಂತನ ಆಶೀರ್ವಾದ ಪಡೆಯಲು ಭಕ್ತರು ದೇವಾಲಯಕ್ಕೆ ಭೇಟಿ ನೀಡುತ್ತಾರೆ. ದೇವಾಲಯದಲ್ಲಿ ಅರ್ಚಕರು ಎಲ್ಲರಿಗೂ ಹೊಸ ವರ್ಷದ ಪಂಚಾಂಗವನ್ನು ಓದಿ ಹೇಳುತ್ತಾರೆ. ಈ ಸಂಪ್ರದಾಯವನ್ನು 'ಪಂಚಾಔಗ ಶ್ರವಣ' ಎಂದು ಕರೆಯಲಾಗುತ್ತದೆ.

**ಸಿಹಿ ಕಹಿಗಳ ಸಮ್ಮಿಶ್ರಣ :** ಯುಗಾದಿ ಹಬ್ಬದಂದು ಇನ್ನೊಂದು ವಿಶೇಷ ಆಚರಣೆ ಎಂದರೆ ಬೇವು – ಬೆಲ್ಲ ಹಂಚುವುದು, ಇದು ಜೀವನದ ಏಳು ಬೀಳುಗಳನ್ನ ಸೂಚಿಸುತ್ತದೆ. ಇದರಲ್ಲಿನ ಬೆಲ್ಲ ಬಾಳಿನ ಸಂತೋಷದ ಕ್ಷಣಗಳ ಸಂಕೇತವಾದರೆ, ಹುಳಿ ಬದುಕಿನ ಸವಾಲುಗಳನ್ನ, ಮಾವು ಆಶ್ಚರ್ಯದ ಕ್ಷಣಗಳನ್ನ, ಬೇವು ಕಹಿ ಕ್ಷಣಗಳ ಸಂಕೇತವಾಗಿದೆ. ವಿಶೇಷವಾದ ಬೇವು –ಬೆಲ್ಲ ಮಿಶ್ರಣವನ್ನು ಮೊದಲು ಭಗವಂತನಿಗೆ ಅರ್ಪಿಸಿ, ನಂತರ ಕುಟುಂಬದ ಸದಸ್ಯರಿಗೆ ಮತ್ತು ಮನೆಗೆ ಬರುವ ಅತಿಥಿಗಳಿಗೂ ನೀಡಲಾಗುತ್ತದೆ. ಕರಾವಳಿಯ ಸೌರಮಾನ ಯುಗಾದಿಯ ವಿಶೇಷತೆ ಖಣಿ ಇಡುವುದು. ಬಾಳೆ ಎಲೆ, ತಟ್ಟೆಯಲಿ ಅಕ್ಕಿ ಹಾಕಿ ಅದರ



ಮೇಲೆ ತೆಂಗಿನಕಾಯಿ, ಸೌತೇಕಾಯಿ, ರವಿಕೆ ಕಣ, ಹೊಸ ಬಟ್ಟೆ, ಚಿನ್ನ, ಬತ್ತದ ತೆನೆ, ಹಣ್ಣು, ದೇವರ ಪ್ರತಿಮೆ ಅದರ ಮುಂದೆ ಒಂದು ಕನ್ನಡಿ ಇತ್ತು, ಆ ಕನ್ನಡಿಯಲಿ ದೇವರ ಪ್ರತಿಮೆ ಹಾಗೂ ತಟ್ಟೆಯಲಿ ಇಟ್ಟಂತಹ ವಸ್ತುಗಳನ್ನು ಕಾಣುವ ಹಾಗೆ ಇಡುತ್ತಾರೆ. ಯುಗಾದಿ ಹಬ್ಬದಂದು ಬೆಳಿಗ್ಗೆ ಬೇಗ ಎದ್ದು ದೇವರ ದೀಪ ಹಚ್ಚಿ ಖಣಿಯಲ್ಲಿನ ಕನ್ನಡಿಯಲಿ ದೇವ ದರ್ಶನ ಪಡೆಯುವುದು ಅಂದಿನ ವಿಶೇಷ. ನಂತರ ಸ್ನಾನ, ಹೋಳಿಗೆ ಚಿತ್ರಾನ್ನದೂಟ. ಕರ್ನಾಟಕ ಆಂಧ್ರಪ್ರದೇಶ, ತೆಲಂಗಾಣ ಹಾಗೂ ಮಹಾರಾಷ್ಟ್ರಗಳಲ್ಲಿ ಯುಗಾದಿ ಹಬ್ಬವನ್ನು ಅತ್ಯಂತ ವಿಶೇಷವಾಗಿ ವಿಜ್ರಂಭಣೆಯಿಂದ ಆಚರಿಸಲಾಗುತ್ತದೆ. ಯುಗಾದಿ ಹಬ್ಬ ಆಚರಣೆ ಪ್ರಯುಕ್ತ ಯುವಕರು, ಹಿರಿಯರು, ಮಹಿಳೆಯರಿಗೆ ಹಾಗೂ ಮಕ್ಕಳ ಮನರಂಜನೆಗಾಗಿ ಆಯಾ ಊರುಗಳ ಸಂಪ್ರದಾಯದಂತೆ ವಿಶೇಷ ಕ್ರೀಡಾಕೂಟ ನಡೆಸಿ ಗೆದ್ದವರಿಗೆ ಬಹುಮಾನ ವಿತರಿಸಲಾಗುತ್ತದೆ.

ಕುಟುಂಬದಲ್ಲಿ ಪ್ರೀತಿ ಸೌಹಾರ್ಧತೆ ಸಂಬಂಧಗಳನ್ನು ಬೆಸೆಯುವುದು ಹಿರಿಯರಿಗೆ ಗೌರವ ಸಲ್ಲಿಸುವುದು ಮಕ್ಕಳಿಗೆ ಕುಟುಂಬ ಮತ್ತು ಸಾಮಾಜಿಕ ಸಂಬಂಧಗಳ ಮಹತ್ವದ ಅರಿವು ಮೂಡಿಸುವುದು ಹಾಗೂ ನೆರೆಹೊರೆಯವರನ್ನು ಪ್ರೀತಿಸುವ ಜೊತೆಗೆ ವಸುದೈವ ಕುಟುಂಬದ ಸಂದೇಶಸಾರುವುದೆ ಯುಗಾದಿ ಹಬ್ಬದ ಮಹತ್ವವಾಗಿದೆ.

**ಸವಿತಾ ನಾಯ್ಕ್, ಬೆಂಗಳೂರು.**

## ಸಮಾಲೋಚನಾ ಸಭೆ



**ಕೃಷಿಯೇತರ ಪತ್ತಿನ ಸಹಕಾರ ಸಂಘಗಳು ಮತ್ತು ವಿವಿಧೋದ್ದೇಶ ಸಹಕಾರ ಸಂಘಗಳ ಕಾರ್ಯನಿರ್ವಹಣೆ ಕುರಿತು ಇತ್ತೀಚೆಗೆ ಹೊರಡಿಸಿರುವ ಆದೇಶದ ಕುರಿತು ಉಡುಪಿ ಜಿಲ್ಲಾ ಸಹಕಾರ ಯೂನಿಯನ್ ನೇತೃತ್ವದಲ್ಲಿ ನಡೆದ ಸಮಾಲೋಚನಾ ಸಭೆಯಲ್ಲಿ ಪತ್ತಿನ ಮಹಾಮಂಡಳದ ನಿರ್ದೇಶಕರಾದ ಶ್ರೀ ಚಿತ್ತರಂಜನ್ ಬೋಳಾರ್ ರವರು ಭಾಗವಹಿಸಿದ್ದರು**

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಕೃಷಿಯೇತರ ಪತ್ತಿನ ಸಹಕಾರ ಸಂಘಗಳು ವಿವಿಧೋದ್ದೇಶ ಸಹಕಾರ ಸಂಘಗಳು ಸಂಗ್ರಹಿಸುತ್ತಿರುವ ಠೇವಣಿಗೆ ಮತ್ತು ವಿತರಿಸುವ ಸಾಲಗಳಿಗೆ ಬಡ್ಡಿದರ ನಿಗದಿಪಡಿಸುವ ಕುರಿತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಪ್ರಕರಣ 30ಬಿ ರಡಿಯಲ್ಲಿ ನಿರ್ದೇಶನ ನೀಡುವ ಕುರಿತು.

ಉಲ್ಲೇಖ : ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆ ಸಂಖ್ಯೆ:ಆರ್.ಸಿ.ಎಸ್/ ಆರ್‌ಎಸ್‌ಆರ್/ ಬಡ್ಡಿದರ ನಿಗದಿ/143/2023–24 ದಿನಾಂಕ:14.03.2024

* * * * *

### ಪ್ರಸ್ತಾವನೆ

ಮೇಲೆ ಓದಲಾದ ಪ್ರಸ್ತಾವನೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ 1934 ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯ್ದೆ 1949 ಹಾಗೂ ಸಹಕಾರ ಸಂಘಗಳ ನಿಬಂಧಕರ ಸೂಚನೆಗಳನ್ನು ಉಲ್ಲಂಘಿಸದಿರಲು ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಗೆ ನಿರ್ದೇಶನಗಳನ್ನು ನೀಡಲಾಗಿದೆ ಎಂದು ಸದರಿ ಸೂಚನೆಗಳನ್ನು ಪಾಲನೆ ಮಾಡದಿರುವುದು ಭಾರತೀಯ ರಿಸರ್ವ್ ಬ್ಯಾಂಕಿನ ಹಾಗೂ ಇಲಾಖೆಯ ಗಮನಕ್ಕೆ ಬಂದಿರುತ್ತದೆ ಎಂದು, ಅಲ್ಲದೇ ಕೃಷಿಯೇತರ ಪತ್ತಿನ ಸಹಕಾರ ಸಂಘಗಳು ಹಾಗೂ ವಿವಿಧೋದ್ದೇಶ ಸಹಕಾರ ಸಂಘಗಳು ಸದಸ್ಯರ ಸಾಲದ ಅವಶ್ಯಕತೆಗನುಣವಾಗಿ ಮಾತ್ರ ಠೇವಣಿಯನ್ನು ಸಂಗ್ರಹಿಸದೆ ತರ್ಕವಿಲ್ಲದ ಅನಿಯಮಿತ ಬಡ್ಡಿದರ ನಿಗದಿಪಡಿಸಿ ಮನಸೋಇಚ್ಛೆ ಠೇವಣಿ ಸಂಗ್ರಹಿಸುವುದು ಹಾಗೂ ಸಾಲದ ಮೇಲೆ ಮಿತಿಮೀರಿದ ಬಡ್ಡಿದರವನ್ನು ನಿಗದಿಪಡಿಸುತ್ತಿರುವ ಬಗ್ಗೆ ಮತ್ತು ಠೇವಣಿಗಳನ್ನು ಸಮರ್ಪಕವಾಗಿ ಬಳಸಿಕೊಳ್ಳದೆ ಗುಣಮಟ್ಟದ ಹಣಕಾಸು ನಿರ್ವಹಣೆ ಮಾಡಲು ವಿಫಲವಾಗುತ್ತಿರುವ ಸಂಬಂಧ ಸರ್ಕಾರಕ್ಕೆ ಹಾಗು ಇಲಾಖೆಗೆ ಅನೇಕ ದೂರುಗಳು ಬರುತ್ತಿದ್ದು ಅಲ್ಲದೇ ವಿಷಯ ಸಂಬಂಧ ಸರ್ಕಾರಕ್ಕೆ ಹಾಗೂ ಇಲಾಖೆಗೆ ಉಭಯ ಸದನಗಳಲ್ಲಿ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್‌ನ ಟ್ಯಾಫ್‌ಕಾಬ್ (Task force on Urban Co operative Banks-TAFCUB) ಸಭೆಗಳಲ್ಲಿ ಕೂಡ ಸಹಕಾರ ಸಂಘಗಳು ಠೇವಣಿಗಳ ಹಾಗೂ ಹೆಚ್ಚಿನ ಬಡ್ಡಿದರ ನಿಗದಿಪಡಿಸುತ್ತಿರುವ ಕುರಿತು ಚರ್ಚೆಯಾಗುತ್ತಿರುವುದಾಗಿ ತಿಳಿಸಿ, ಠೇವಣಿದಾರರು ಸಾಲಗಾರರ ಹಾಗೂ ಸಾರ್ವಜನಿಕ ಹಿತಾಸಕ್ತಿಯನ್ನು ಸಂರಕ್ಷಿಸುವ ಸದುದ್ದೇಶದಿಂದ ರಾಜ್ಯದಲ್ಲಿನ ಎಲ್ಲಾ ಕೃಷಿಯೇತರ ಪತ್ತಿನ ಸಹಕಾರ ಸಂಘಗಳು ವಿವಿಧೋದ್ದೇಶ ಸಹಕಾರ ಸಂಘಗಳಿಗೆ ಈ ಕೆಳಕಂಡ ನಿರ್ದೇಶನಗಳನ್ನು ನೀಡುವ ಕುರಿತು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 30ಬಿ ರಡಿ ಸರ್ಕಾರಕ್ಕೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ 01ನೇ ಏಪ್ರಿಲ್ 2024ರಿಂದ ಜಾರಿಗೆ ಬರುವಂತೆ ಆದೇಶ ಹೊರಡಿಸಲು ನಿಬಂಧಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪರಿಶೀಲಿಸಲಾಗಿ ಇತ್ತೀಚಿನ ವಿದ್ಯಾಮಾನಗಳಲ್ಲಿ ಸಹಕಾರ ಸಂಘಗಳ ಹಣದುರುಪಯೋಗ ಹಾಗೂ ಠೇವಣಿದಾರರಿಗೆ ವಂಚನೆ ಮಾಡಿರುವ ಹಲವಾರು ಪ್ರಕರಣವು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ನಿಯಮ 1960ಗಳನ್ನು ಉಲಂಘಿಸಿ ಹಲವಾರು ಸಹಕಾರ ಸಂಘಗಳು ನಿಯಮಬಾಹಿರವಾಗಿ ಠೇವಣಿ ಸಂಗ್ರಹಿಸುತ್ತಿರುವುದು, ಅಲ್ಲದೇ ಸಾಲದ ಮೇಲೆ ಮಿತಿ ಮೀರಿದ ಬಡ್ಡಿ ವಿಧಿಸುತ್ತಿರುವುದು, ಸಹಕಾರ ಸಂಘಗಳಲ್ಲಿ ಹೂಡಿಕೆ ಮಾಡಲಾದ ಹಣವನ್ನು ಸ್ವಹಿತಾಸಕ್ತಿಗಾಗಿ ಬಳಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸಹಕಾರ ಸಂಘಗಳ ಸದಸ್ಯ ಠೇವಣಿದಾರರ ಸಾಲಗಾರರ ಹಾಗೂ ಸಾರ್ವಜನಿಕರ ಹಿತಾಸಕ್ತಿಯನ್ನು ಸಂರಕ್ಷಿಸುವ ಸದುದ್ದೇಶದಿಂದ ಬಡ್ಡಿದರ ನಿಗದಿಪಡಿಸುವ ಕುರಿತು ಹಲವು ನಿರ್ದೇಶನಗಳನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ.30ಬಿ ರಡಿ ಸರ್ಕಾರಕ್ಕೆ ಪ್ರದತ್ತವಾಗಿರುವ ಅಧಿಕಾರದನ್ವಯ ನೀಡಿ ಏಪ್ರಿಲ್ 01 ರಿಂದ ಜಾರಿಗೆ ಬರುವಂತೆ ಆದೇಶ ಹೊರಡಿಸಿರುವುದು ಸೂಕ್ತವೆಂದು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಸಿ.ಒ.39 ಸಿಎಲ್‌ಎಮ್ 2024, ಬೆಂಗಳೂರು ದಿನಾಂಕ:16.03.2024**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 30ಬಿ ರಡಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಹಕಾರ ಸಂಘಗಳ ಠೇವಣಿದಾರರ ಮತ್ತು ಸಾಲಗಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದಕ್ಕಾಗಿ ಮತ್ತು ಸಹಕಾರ ಸಂಘಗಳ ಗುಣಮಟ್ಟದ ಅಭಿವೃದ್ಧಿಗಾಗಿ ಏಪ್ರಿಲ್ 01ರಿಂದ ಜಾರಿಗೆ ಬರುವಂತೆ ಈ ಕೆಳಕಂಡ ನಿರ್ದೇಶನಗಳನ್ನು ನೀಡಿ ಆದೇಶಿಸಿದೆ.

1. ಕರ್ನಾಟಕ ಸಹಕಾರ ಸಂಘಗಳ ಅಧಿನಿಯ, 1959ರಡಿ ನೋಂದಾಯಿಸಲಾದ ಕೃಷಿಯೇತರ ಪತ್ತಿನ ಸಹಕಾರ ಸಂಘಗಳು ಹಾಗೂ ವಿವಿಧೋದ್ದೇಶ ಸಹಕಾರ ಸಂಘಗಳು ಸಂಗ್ರಹಿಸುತ್ತಿರುವ ಠೇವಣಿಗಳಿಗೆ ರಾಷ್ಟ್ರದಲ್ಲಿಯೇ ಹೆಚ್ಚು ವಹಿವಾಟನ್ನು ಹೊಂದಿರುವ ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ವಿವಿಧ ಪ್ರಕಾರದ ಠೇವಣಿಯ ಮೇಲೆ ವಿವಿಧ ಅವಧಿಗೆ ನಿಗದಿಪಡಿಸುವ ಬಡ್ಡಿದರ ಅಥವಾ ಅದರ ಮೇಲೆ ಶೇಕಡ ಎರಡು(2%)ರಷ್ಟು ಅಧಿಕ ಬಡ್ಡಿಯನ್ನು ಮಾತ್ರ ನಿಗದಿಪಡಿಸತಕ್ಕದ್ದು
2. ಹಿರಿಯ ನಾಗರೀಕರ ಠೇವಣಿಯ ಮೇಲೆ ಶೇ.0.50ರಷ್ಟು ಅಧಿಕ ಬಡ್ಡಿಯನ್ನು ನಿಗದಿಪಡಿಸಬಹುದಾಗಿದೆ.
3. ಪಿಗ್ಮಿ ಠೇವಣಿಯ ಮೇಲೆ ಕೊಡುವ ಕಮೀಷನ್ ದರವು ಶೇಕಡ ಮೂರನ್ನು ಮೀರತಕ್ಕದ್ದಲ್ಲ.
4. ಬೇರೆ ಯಾವುದೇ ಪ್ರಾಥಮಿಕ ಸಹಕಾರ ಸಂಘ ಹಾಗೂ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಚಿಸಲಾದ ಫರ್ಮ್ ಕಂಪನಿ ಅಥವಾ ಯಾವುದೇ ಇತರೇ ನಿಗಮಿತ ನಿಕಾಯಗಳಲ್ಲಿ ಠೇವಣಾತಿಸುವ ದೃಷ್ಟಿಯಿಂದ ಠೇವಣಿ ಸಂಗ್ರಹಿಸತಕ್ಕದ್ದಲ್ಲ.
5. ಸಂಘದ ಹಣವನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸತಕ್ಕದ್ದಲ್ಲ.
6. ಸಹಕಾರ ಸಂಸ್ಥೆಗಳು ಸ್ಥಾನಿಕ ಹಣಕಾಸು ಸಂಸ್ಥೆಗಳಾಗಿದ್ದು ಇಂತಹ ಸಹಕಾರ ಸಂಸ್ಥೆಗಳಲ್ಲಿ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಮುಖಾಂತರ ಕಮೀಷನ್/ಇನ್‌ಸೆಂಟಿವ್ ಕೊಡುವುದರ ಮೂಲಕ ಠೇವಣಿಗಳನ್ನು ಸ್ವೀಕರಿಸತಕ್ಕದ್ದಲ್ಲ
7. ಹೆಚ್ಚುವರಿ ದ್ರವ ಸಂಪನ್ಮೂಲವನ್ನು ಕಡ್ಡಾಯವಾಗಿ ಸಹಕಾರ ಸಂಸ್ಥೆಗಳಾದ ಅಪೆಕ್ಸ್ ಬ್ಯಾಂಕ್ ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಹೂಡಿಕೆ ಮಾಡತಕ್ಕದ್ದು.
8. ವಿತರಿಸುವ ಸಾಲಗಳಿಗೆ ಗರಿಷ್ಠ ಶೇಕಡ (12%) ಹನ್ನೆರಡು ಬಡ್ಡಿದರ ಮೀರತಕ್ಕದ್ದಲ್ಲ ಸುಸ್ತಿ ಪ್ರಕರಣಗಳಲ್ಲಿ ಹೆಚ್ಚುವರಿಯಾಗಿ ಗರಿಷ್ಠ ಶೇಕಡ (2%) ಎರಡರಷ್ಟು ಬಡ್ಡಿದರ ಮೀರತಕ್ಕದ್ದಲ್ಲ.
9. ಪತ್ತಿನ ಸಹಕಾರ ಸಂಘಗಳು ವಿವಿಧ ಸ್ವರೂಪದ ಸಾಲ ಸೌಲಭ್ಯ ನೀಡುವುದಕ್ಕೆ ಮಾತ್ರ ಸೀಮಿತವಾಗಿರತಕ್ಕದ್ದು.
10. ಅವಶ್ಯವಿದ್ದಲ್ಲಿ ಸಂಘದ ಆಡಳಿತಮಂಡಳಿಯು ಬಡ್ಡಿದರವನ್ನು ಪರಿಷ್ಕರಿಸಿ ಈ ಕುರಿತು ಸಹಕಾರ ಸಂಘಗಳ ಜಿಲ್ಲಾ ಉಪನಿಬಂಧಕರಿಗೆ ಕಡ್ಡಾಯವಾಗಿ ವರದಿಯನ್ನು ಸಲ್ಲಿಸತಕ್ಕದ್ದು.
11. ಉಪವಿಭಾಗೀಯ ಮಟ್ಟದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರ, ಜಿಲ್ಲಾ ಮಟ್ಟದಲ್ಲಿ ಸಹಕಾರ ಸಂಘಗಳ ಉಪನಿಬಂಧಕರ ಪ್ರಾಂತೀಯ ಮಟ್ಟದಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರ ಅಧ್ಯಕ್ಷತೆಯಲ್ಲಿ ತ್ರೈಮಾಸಿಕವಾಗಿ ಸಹಕಾರ ಸಂಘಗಳ ಸಭೆ ಜರುಗಿಸಿ ಈ ಆದೇಶದಲ್ಲಿ ನೀಡಿದ ನಿರ್ದೇಶನದಂತೆ ಬಡ್ಡಿದರ ಪರಿಷ್ಕರಿಸಿ ನಿಗದಿಪಡಿಸುತ್ತಿರುವ ಕುರಿತು ಪರಾಮರ್ಷಿಸುವುದು ಹಾಗೂ ಉಲ್ಲಂಘನೆ ಮಾಡುವ ಸಹಕಾರ ಸಂಘಗಳ ಆಡಳಿತ ಮಂಡಳಿ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ನಿಯಮಾವಳಿಗಳು 1960ರ ಅವಕಾಶಗಳಂತೆ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು ಹಾಗೂ ಸಭೆಯ ನಿರ್ಣಯ ಮತ್ತು ತೆಗೆದುಕೊಂಡ ಕ್ರಮದ ಕುರಿತು ಮೇಲಧಿಕಾರಿಗಳಿಗೆ ವರದಿಯನ್ನು ಸಲ್ಲಿಸತಕ್ಕದ್ದು.

ಈ ಆದೇಶದ ನಿರ್ದೇಶನಗಳನ್ನು ಅನುಷ್ಠಾನಗೊಳಿಸಲು ವಿಫಲರಾಗುವ ಇಲಾಖಾಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕೈಗೊಳ್ಳಲಾಗುವುದು.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**
**(ಎ.ಸಿ.ದಿವಾಕರ್)**
**ವಿಶೇಷ ಕರ್ತವ್ಯಾಧಿಕಾರಿ ಹಾಗೂ**
**ಪದನಿಮಿತ್ತ ಸರ್ಕಾರ ಜಂಟಿ ಕಾರ್ಯದರ್ಶಿ**
**ಸಹಕಾರ ಇಲಾಖೆ**

ಕೃಷಿಯೇತರ ಪತ್ತಿನ ಸಹಕಾರ ಸಂಘಗಳು, ವಿವಿಧೋದ್ದೇಶ ಸಹಕಾರ ಸಂಘಗಳು ಸಂಗ್ರಹಿಸುವ ಠೇವಣಿ, ವಿತರಿಸುವ ಸಾಲಗಳಿಗೆ ಸಂಬಂಧಿಸಿದ ಸುತ್ತೋಲೆ ಹಿಂಪಡೆಯುವ ಬಗ್ಗೆ ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ನಿರ್ದೇಶಕರುಗಳು ಸಹಕಾರ ಇಲಾಖೆಯ ವಿಶೇಷ ಅಧಿಕಾರಿ ಶ್ರೀ ಎ.ಸಿ. ದಿವಾಕರ್ ಮತ್ತು ಜಂಟಿ ನಿಬಂಧಕ (ಕಾನೂನು ಕೋಶ)ರಾದ ಶ್ರೀ ಕಲ್ಲಪ್ಪ ಓಬಣ್ಣಗೋಳ ಮತ್ತು ಪಟ್ಟಣ ಬ್ಯಾಂಕುಗಳ ವಿಭಾಗದ ಜಂಟಿ ನಿಬಂಧಕರಾದ ಪಿ. ಮಹೇಶ್ ಅವರುಗಳಿಗೆ ಮನವಿ ಸಲ್ಲಿಸಿದರು.







ಕೃಷಿಯೇತರ ಪತ್ತಿನ ಸಹಕಾರ ಸಂಘಗಳು ಮತ್ತು ವಿವಿಧೋದ್ದೇಗಳ ಸಹಕಾರ ಸಂಘಗಳು ಸಂಗ್ರಹಿಸುವ ಠೇವಣಿ, ವಿತರಿಸುವ ಸಾಲಗಳಿಗೆ ಸಂಬಂಧಿಸಿದ ಸರ್ಕಾರದ ಆದೇಶವನ್ನು ಹಿಂಪಡೆಯುವ ಬಗ್ಗೆ ಪತ್ತಿನ ಸಹಕಾರ ಸಂಘಗಳ ಪ್ರತಿನಿಧಿಗಳು ಮೂಡಲಗಿಯಲ್ಲಿ ಸಭೆ ನಡೆಸಿದರು.